# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 04, ಭೂತರಾಮನಹಟ್ಟಿ, ಬೆಳಗಾವಿ - 591156

(ನ್ಯಾಕ್ ಮಾನ್ಯತೆ B+ ಗ್ರೇಡ್– 2021) PM-USHA (MERU)

## 92ನೇ ಸಾಮಾನ್ಯ ಸಿಂಡಿಕೇಟ್ ಸಭೆ ಹಾಗೂ 2025ನೇ ಸಾಲಿನ 2ನೇ ಸಭೆಯ ನಡಾವಳಿಗಳು

ದಿನಾಂಕ : ಗುರುವಾರ, 27-03-2025

ಸಮಯ : ಮಧ್ಯಾಹ್ನ 03 : 00 ಘಂಟೆ

ಸ್ಥಳ : ಸಿಂಡಿಕೇಟ್ ಸಭಾಂಗಣ
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ,
ಬೆಳಗಾವಿ.

Approved
8/4/1

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ **92ನೇ ಸಾಮಾನ್ಯ ಸಿಂಡಿಕೇಟ್** ಹಾಗೂ **2025ನೇ ಸಾಲಿನ 2ನೇ ಸಭೆಯನ್ನು** ದಿನಾಂಕ 27 ಮಾರ್ಚ್ 2025 ರಂದು ಮಧ್ಯಾಹ್ನ 3.00 ಘಂಟೆಗೆ ಜರುಗಿದ ಸಭೆಗೆ ಹಾಜರಿದ್ದ/ಹಾಜರಿರದ ಸದಸ್ಯರುಗಳ ವಿವರ.

## I. ಹಾಜರಿದ್ದ ಸದಸ್ಯರು

| | | |
|---|---|---|
| 1. | **ಪ್ರೊ. ಸಿ. ಎಂ. ತ್ಯಾಗರಾಜ** | **ಕುಲಪತಿಗಳು ಹಾಗೂ ಅಧ್ಯಕ್ಷರು** |
| 2. | ಪ್ರೊ. ಎಸ್. ಬಿ. ಆಕಾಶ | ಸದಸ್ಯರು |
| 3. | ಶ್ರೀ ವಿನೀತ್ ವ. ಜೋಶಿ | ಸದಸ್ಯರು |
| 4. | ಶ್ರೀ ಈರಣ್ಣ ಬ. ಹಪ್ಪಲಿ | ಸದಸ್ಯರು |
| 5. | ಶ್ರೀ ಆರ್. ಎಂ. ದೇವರಡ್ಡಿ | ಸದಸ್ಯರು |
| 6. | ಶ್ರೀ ಜಗದೀಶ ಜೋಡಂಗಿ | ಸದಸ್ಯರು |
| 7. | ಶ್ರೀ ಎಸ್. ಎ. ದೇಶಮುಖ | ಸದಸ್ಯರು |
| 8. | ಶ್ರೀಮತಿ ಎಸ್. ಬಿ. ಥಾಂಗ | ಸದಸ್ಯರು |
| 9. | ಡಾ. ಕಾವೇರಿ ಎಚ್.ಎಂ. | ಸದಸ್ಯರು |
| 10. | ಶ್ರೀ. ರವೀಂದ್ರ ಎಂ. ನಾಯ್ಕರ್ | ಸದಸ್ಯರು |
| 11. | ಶ್ರೀ. ರಫೀ ಭಂಡಾರಿ | ಸದಸ್ಯರು |
| 12. | ಡಾ. ಮಾರುತಿ ಎಚ್. ಮುಂಡರಗಿ | ಸದಸ್ಯರು |
| 13. | ಶ್ರೀ. ಮಹಾಂತೇಶ ಕಂಬಾರ | ಸದಸ್ಯರು |
| 14. | ಡಾ. ಎಸ್.ಎಸ್. ಅಂಗಡಿ | ಸದಸ್ಯರು |
| 15. | ಶ್ರೀಮತಿ ಎಂ.ಎ. ಸಪ್ನ, ಕೆ.ಎ.ಎ.ಎಸ್.(ಹಣಕಾಸು ಅಧಿಕಾರಿಗಳು) | ವಿಶೇಷ ಆಹ್ವಾನಿತರು |
| 16. | ಶ್ರೀ ರವೀಂದ್ರನಾಥ ಕದಮ್, (ಕುಲಸಚಿವರು(ಮೌಲ್ಯಮಾಪನ) | ಸದಸ್ಯರು |
| 17. | ಶ್ರೀ. ಸಂತೋಷ ಕಾಮಗೌಡ (ಕೆ.ಎ.ಎಸ್.(ಹಿರಿಯ ಶ್ರೇಣಿ)) | **ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು** |

## II. ಹಾಜರಾಗದ ಸದಸ್ಯರು:

| | | |
|---|---|---|
| 1. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ | ಸದಸ್ಯರು |
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ | ಸದಸ್ಯರು |
| 3. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ | ಸದಸ್ಯರು |
| 4. | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ | ಸದಸ್ಯರು |
| 5. | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ | ಸದಸ್ಯರು |

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

**ವಿದ್ಯಾಸಂಗಮ, ಬೆಂಗಳೂರು–ಪೂನಾ ರಾ.ಹೆ.–4, ಬೆಳಗಾವಿ–591156**

**ಸಿಂಡಿಕೇಟ್ ಪ್ರಾಧಿಕಾರ ಸಭೆಯ ನಡುವಳಿಗಳು**

**ವಿಷಯ:** ದಿನಾಂಕ 27 ಮಾರ್ಚ್ 2025 ರಂದು ಸಿಂಡಿಕೇಟ್ ಸಭಾಂಗಣ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇಲ್ಲಿ ನಡೆದ ವಿಶ್ವವಿದ್ಯಾಲಯದ 91ನೇ ಹಾಗೂ 2025ನೇ ಸಾಲಿನ 2ನೇ ಸಾಮಾನ್ಯ ಸಿಂಡಿಕೇಟ್ ಪ್ರಾಧಿಕಾರ ಸಭೆಯ ನಡುವಳಿಗಳು.

**ಉಲ್ಲೇಖ:** 1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (27)(28)(2).
2. ಮಾನ್ಯ ಕುಲಪತಿಗಳು ಸಭೆ ನಡೆಸಲು ನೀಡಿದ ಅನುಮೋದನೆ ದಿ: 12.03.2025.
3. ಸಿಂಡಿಕೇಟ್ ಪ್ರಾಧಿಕಾರ ಸಭೆ ನೋಟಿಸ್ ದಿನಾಂಕ: 12.03.2025.

**ಪ್ರಸ್ತಾವನೆ:**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (28)(2)ರ ಅನುಗುಣವಾಗಿ ಸಿಂಡಿಕೇಟ್ ಪ್ರಾಧಿಕಾರದ 92ನೇ ಹಾಗೂ 2025 ನೇ ಸಾಲಿನ 2 ನೇ ಸಾಮಾನ್ಯ ಸಿಂಡಿಕೇಟ್ ಸಭೆಯನ್ನು ದಿನಾಂಕ: 27.03.2025 ರಂದು ಮಧ್ಯಾಹ್ನ 3.00 ಗಂಟೆಗೆ ಸಿಂಡಿಕೇಟ್ ಸಭಾಂಗಣ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇಲ್ಲಿ ಆಯೋಜನೆ ಮಾಡಲಾಗಿತ್ತು. ಮೊದಲನೆಯದಾಗಿ ಪ್ರಾಂಶುಪಾಲರ ಜೇಷ್ಠತಾ ಪಟ್ಟಿಯನ್ವಯ ಸಿಂಡಿಕೇಟ್ ಸದಸ್ಯರಾಗಿ ಆಯ್ಕೆಯಾಗಿರುವ ಶ್ರೀ. ಆರ್. ಎಂ. ದೇವರೆಡ್ಡಿ, ಶ್ರೀ ಜಗದೀಶ ಜೋಡಂಗಿ, ಶ್ರೀ, ಎಸ್. ಎ. ದೇಶಮುಖ ಹಾಗೂ ಶ್ರೀಮತಿ ಎಸ್. ಬಿ. ಥಾಂಗ ಇವರುಗಳಿಗೆ ಹೂಗುಚ್ಛ ನೀಡುವುದರ ಮೂಲಕ ಸಭೆಗೆ ಬರಮಾಡಿಕೊಳ್ಳಲಾಯಿತು. ನಂತರ ಸಭೆಯ ಅಧ್ಯಕ್ಷರು ಮತ್ತು ಎಲ್ಲ ಸದಸ್ಯರುಗಳನ್ನು ಕುಲಸಚಿವರು ಸ್ವಾಗತಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಮಾನ್ಯ ಕುಲಪತಿಗಳು, ದಿನಾಂಕ: 07.04.2025 ರಂದು ವಿಶ್ವವಿದ್ಯಾಲಯದ 13ನೇ ಘಟಿಕೋತ್ಸವವು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇಲ್ಲಿ ಜರುಗಲಿದ್ದು ಘನತೆವೆತ್ತ ಸನ್ಮಾನ್ಯ ರಾಜ್ಯಪಾಲರು ಆಗಮಿಸುತ್ತಿದ್ದಾರೆ. ಸದರಿ ಘಟಿಕೋತ್ಸವದಲ್ಲಿ ಶ್ರೀಮಾನ ನಿರಂಜನ ಜಗದ್ಗುರು ಪಂಚಮ ಶ್ರೀ ಶಿವಲಿಂಗೇಶ್ವರ ಸ್ವಾಮಿಜೀ ಮತ್ತು ನ್ಯಾಯಮೂರ್ತಿ ಶ್ರೀ ನಾಗಮೋಹನ ದಾಸ, ನಿವೃತ್ತ ನ್ಯಾಯಮೂರ್ತಿಗಳು ಹಾಗೂ ಶ್ರೀ ಶಂಶುದ್ದೀನ ಅಬ್ದುಲ್ಲಾ ಪುಣೇಕರ, ಸಂಸ್ಥಾಪಕರು ಮತ್ತು ಅಧ್ಯಕ್ಷರು, Social Economics & Cultural Association Vijaypur ಇವರುಗಳಿಗೆ ಗೌರವ ಡಾಕ್ಟರೇಟ್ ಪ್ರಧಾನ ಮಾಡಲಾಗುವುದು. ಕಾರಣ ಎಲ್ಲ ಸದಸ್ಯರುಗಳು ಘಟಿಕೋತ್ಸವದಲ್ಲಿ ಭಾಗವಹಿಸಲು ತಿಳಿಸಿದರು. ಮುಂದುವರೆದು, ಹಿರೇಬಾಗೇವಾಡಿ–ಹಾಲಗಿಮರ್ಡಿ ಗ್ರಾಮದಲ್ಲಿ ನಿರ್ಮಾಣವಾಗುತ್ತಿರುವ ನೂತನ ಕಟ್ಟಡ ಕಾಮಗಾರಿ ಹಾಗೂ PM-Usha ಅಡಿಯಲ್ಲಿ ಪ್ರಗತಿಯಲ್ಲಿರುವ ವಿವಿಧ ಕಾರ್ಯಗಳ ಕುರಿತು ಸಭೆಗೆ ಸಂಕ್ಷಿಪ್ತ ಮಾಹಿತಿ ನೀಡಿದರು. ದೇಶಪಾಂಡೆ ಫೌಂಡೇಶನ, ಹುಬ್ಬಳ್ಳಿ ಇವರು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳಿಗೆ ಕೌಶಲ್ಯ ಅಭಿವೃದ್ಧಿ ತರಬೇತಿ ನೀಡಲು ಇಚ್ಛೆ ವ್ಯಕ್ತಪಡಿಸಿರುವುದಕ್ಕೆ ಹಾಗೂ ರಾಷ್ಟ್ರೀಯ ಹೆದ್ದಾರಿ–4 ರಿಂದ ನೂತನ ಕಟ್ಟಡದವರೆಗೆ ರಸ್ತೆ ನಿರ್ಮಿಸಲು ಹಣವನ್ನು ಮಂಜೂರು ಮಾಡಿರುವುದಕ್ಕೆ ಸನ್ಮಾನ್ಯ ಲೋಕೋಪಯೋಗಿ ಸಚಿವರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರಿಗೆ ಮಾನ್ಯ ಕುಲಪತಿಗಳು ಧನ್ಯವಾದ ತಿಳಿಸಿದರು.

ತದನಂತರ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಸಹಾಯಕ ಕೇಂದ್ರ (IVR) RCU Helpline-9480431000 ಗೆ ಮಾನ್ಯ ಕುಲಪತಿಗಳು ಚಾಲನೆ ನೀಡುವುದರ ಮೂಲಕ ಸಭೆಯನ್ನು ಪ್ರಾರಂಭಿಸಿ ವಿಷಯಸೂಚಿಗಳನ್ನು ಪ್ರಸ್ತಾಪಿಸಲಾಯಿತು.

**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 92 ನೇ ಹಾಗೂ 2025 ನೇ ಸಾಲಿನ 2 ನೇ ಸಾಮಾನ್ಯ ಸಿಂಡಿಕೇಟ್ ಸಭೆಯ ಕಾರ್ಯಸೂಚಿ ಅನುಗುಣವಾಗಿ ದಿನಾಂಕ 27–03–2025 ರಂದು ಕೈಗೊಂಡ ತೀರ್ಮಾನಗಳು.**

| | ಸಂಖ್ಯೆ | ಕಾರ್ಯಸೂಚಿ ವಿವರ ಹಾಗೂ ಕೈಗೊಂಡ ತೀರ್ಮಾನಗಳು |
|---|---|---|
| 01 | 2025/03/01 | ಹಿಂದಿನ ಸಭೆಗಳ ಗೊತ್ತುವಳಿಗಳನ್ನು ಹಾಗೂ ಅನುಪಾಲನಾ ವರದಿಗಳನ್ನು ಸಭೆಯ ದೃಢೀಕರಣಕ್ಕಾಗಿ ಮಂಡಿಸಲಾಯಿತು.<br><br>ವಿಷಯಸೂಚಿ ಸಂಖ್ಯೆ: 2 ರಲ್ಲಿ PMC ಕಾರ್ಯವೈಖರಿ ಕುರಿತಾಗಿ ಆಕ್ಷೇಪಣೆಗಳು ವ್ಯಕ್ತವಾದ ಹಿನ್ನೆಲೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರಿಗೆ PMC ರದ್ದುಪಡಿಸಲು ಈಗಾಗಲೇ ಪತ್ರ ಬರೆಯಲಾಗಿದೆ ಹಾಗೂ Third Party Inspection ಕೈಗೊಳ್ಳಲು ಕೂಡ ತೀರ್ಮಾನಿಸಲಾಗಿತ್ತು. ಆದರೆ, KTPP ಅಧಿನಿಯಮದಲ್ಲಿ ರೂ. 50 ಲಕ್ಷ ರೂಪಾಯಿ ವರೆಗಿನ ಕಾಮಗಾರಿಗೆ Third Party Inspection ಮಾಡಿಸಲು ಹಾಗೂ ರೂ. 50 ಲಕ್ಷ ರೂಪಾಯಿ ಮೇಲ್ಪಟ್ಟ ಕಾಮಗಾರಿಗೆ PMC ಮಾಡಿಸಲು ತಿಳಿಸಲಾಗಿದೆ. ಪ್ರಸ್ತುತ ಪ್ರಗತಿಯಲ್ಲಿರುವ ಕಾಮಗಾರಿಗಳು 50 ಲಕ್ಷ ರೂಪಾಯಿಗಳ ಮೇಲ್ಪಟ್ಟು ಇರುವುದರಿಂದಾಗಿ ಹೆಚ್ಚುವರಿಯಾಗಿ Third Party Inspection, PMC ಮಾಡಿಸುವುದರಿಂದಾಗಿ ವಿಶ್ವವಿದ್ಯಾಲಯಕ್ಕೆ ಆರ್ಥಿಕ ಹೊರೆಯಾಗುತ್ತದೆ. ಕಾರಣ, ವಿಶ್ವವಿದ್ಯಾಲಯದ ಕಟ್ಟಡ ವಿಭಾಗದ ಅರ್ಹ ಅಭಿಯಂತರರಿಂದ Third Party Inspection ನಡೆಸಿ ವರದಿಯನ್ನು ಪಡೆದುಕೊಳ್ಳಲು ಹಾಗೂ ಹೊಸದಾಗಿ PMC ನ್ನು ವಿಶ್ವವಿದ್ಯಾಲಯದಿಂದ ನಿಯೋಜಿಸಿಕೊಳ್ಳಲು ಹಾಗೂ PMC ಶುಲ್ಕವನ್ನು ಭರಿಸಲು ತೀರ್ಮಾನಿಸಲಾಗಿದೆ ಹಾಗೂ ಮುಂದಿನ PMC ನಿರ್ವಹಣೆ ಮೊತ್ತವನ್ನು ವಿಶ್ವವಿದ್ಯಾಲಯದಿಂದ ಪಾವತಿಸಲು ಕಡಿತಗೊಳಿಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪತ್ರ ಬರೆಯಲು ಕ್ರಮ ಕೈಗೊಳ್ಳಲಾಗುವುದು ಎಂದು ಕುಲಸಚಿವರು ಸಭೆಗೆ ವಿವರಿಸಿದ ಹಿನ್ನೆಲೆಯಲ್ಲಿ ಸಭೆಯು ಅನುಮೋದನೆ ನೀಡಿತು.<br><br>ವಿಷಯಸೂಚಿ ಸಂಖ್ಯೆ: 2025/12/23 ರಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕ ಪರೀಕ್ಷೆಗಳು ದಿನಾಂಕ: 31-12-2024 ರಿಂದ ಪ್ರಾರಂಭವಾಗಿವೆ. ಪ್ರಸ್ತುತ ಕೆಲವು ಪ್ರಶ್ನೆ ಪತ್ರಿಕೆಗಳಲ್ಲಿ ಪ್ರಶ್ನೆಗಳು ಪುನರಾವರ್ತನೆ, ಕಾಗುಣಿತದ ದೋಷಗಳು, ಅನುವಾದದಲ್ಲಿ ದೋಷಗಳು, ತಪ್ಪಾದ ಅಂಕಿ-ಸಂಖ್ಯೆಗಳ ಉಲ್ಲೇಖಗಳು ಕಂಡು ಬಂದಿದ್ದು ಈ ಕುರಿತು ಕನ್ನಡ(ಪ್ರಾಚೀನ ಕನ್ನಡ ಸಾಹಿತ್ಯ ಚರಿತ್ರೆ), ವಾಣಿಜ್ಯಶಾಸ್ತ್ರ ವಿಷಯಗಳ ಕುರಿತಾಗಿ ಕೆಲವು ಉದಾಹರಣೆಗಳನ್ನು ಕುಲಸಚಿವರು(ಮೌ) ಸಭೆಗೆ ತಿಳಿಸಿದರು ಹಾಗೂ ಸಂಬಂಧಿಸಿದವರಿಗೆ ವಿಧಿಸಲಾಗುವ ದಂಡದ ಕುರಿತಾಗಿ ಘನತೆವೆತ್ತ ಕುಲಾಧಿಪತಿಗಳಿಂದ ಅನುಮೋದನೆ ಪಡೆದುಕೊಂಡಿರುವ ಆರ್ಡಿನನ್ಸ್ ಪ್ರತಿಯನ್ನು ಸಭೆಗೆ ಪ್ರಸುತಪಡಿಸಿದರು. ಪರಿನಿಯಮಗಳಲ್ಲಿ ಹೀಗೆ ತಪ್ಪು ಪ್ರಶ್ನೆಗಳನ್ನು ತಯಾರಿಸದವರಿಗೆ ಕಡಿಮೆ ದಂಡ ನಿಗದಿಪಡಿಸಲಾಗಿದ್ದು ಇದರಿಂದಾಗಿ ತಪ್ಪುಗಳು ಮರುಕಳಿಸುವ ಹೆಚ್ಚಿನ ಸಾಧ್ಯತೆ ಇರುತ್ತದೆ ಎಂದು ಸದಸ್ಯರುಗಳು ಅಭಿಪ್ರಾಯ ವ್ಯಕ್ತಪಡಿಸಿದರು. ದಾಖಲಾತಿಗಳನ್ನು ಪರಿಶೀಲಿಸಿದ ಸಭೆಯು ಕನ್ನಡ ವಿಷಯದ ಪ್ರಶ್ನೆ-ಪತ್ರಿಕೆಯು ಉದ್ದೇಶಪೂರ್ವಕವಾಗಿ ಬೇಜವಾಬ್ದಾರಿಯಿಂದ ತಯಾರಿಸಿದ್ದು ಕಂಡು ಬಂದಿದ್ದು ಇದರಿಂದಾಗಿ ವಿಶ್ವವಿದ್ಯಾಲಯದ ಘನತೆ ಗೌರವಕ್ಕೆ ಧಕ್ಕೆ ಉಂಟಾಗಿದೆ. ಕಾರಣ, ಸಂಬಂಧಿಸಿದ ಸಮಿತಿಗೆ ರೂ. 1 ಲಕ್ಷ ದಂಡ ವಿಧಿಸಲು ಸಭೆಯು ತೀರ್ಮಾನಿಸಿತು. ಎಂದು ತಪ್ಪಾಗಿ ನಮೂದಾಗಿರುತ್ತದೆ. ಕಾರಣ, ಸಂಬಂಧಿಸಿದ ಸಮಿತಿ ಬದಲಾಗಿ ಪ್ರಶ್ನೆ ಪತ್ರಿಕೆ ಸಿದ್ಧಪಡಿಸಿದ ಅಧ್ಯಾಪಕರಿಗೆ ರೂ. 1 ಲಕ್ಷ ದಂಡ ವಿಧಿಸಲು ಸಭೆಯು ತೀರ್ಮಾನಿಸಿತು ಎಂದು ತಿದ್ದುಪಡಿಗೊಳಿಸಲಾಯಿತು.<br><br>ವಿಷಯಸೂಚಿ ಸಂಖ್ಯೆ: 2025/12/VI ರಲ್ಲಿ ಘಟಿಕೋತ್ಸವಕ್ಕೆ ಸಂಬಂಧಿಸಿದ ಎಲ್ಲಾ ಕಡತಗಳನ್ನು ಕುಲಸಚಿವರು(ಮೌ) ಇವರು ಕುಲಸಚಿವರು(ಆಡಳಿತ) ಇವರ ಮೂಲಕ ಮಂಡಿಸಿ ಮಾನ್ಯ ಕುಲಪತಿಗಳ ಅನುಮೋದನೆ ಪಡೆಯಲು ತೀರ್ಮಾನಿಸಲಾಯಿತು ಎಂಬುದನ್ನು ಘಟಿಕೋತ್ಸವಕ್ಕೆ ಸಂಬಂಧಿಸಿದ ಕಡತಗಳನ್ನು ಕುಲಸಚಿವರು(ಮೌ) ಇವರು ಮಂಡಿಸಿ ಮಾನ್ಯ ಕುಲಪತಿಗಳ |

| | | |
|---|---|---|
| | | ಅನುಮೋದನೆ ಪಡೆದು ಮುಂದಿನ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಯಿತು ಎಂದು ತಿದ್ದುಪಡಿಗೊಳಿಸಲಾಯಿತು. ಹಣಕಾಸು ಅಧಿಕಾರಿಗಳ ಅಭಿಪ್ರಾಯದಂತೆ ಹಾಗೂ ಈ ಹಿಂದಿನ ಸಿಂಡಿಕೇಟ್ ತೀರ್ಮಾನದಂತೆ ವಿಶ್ವವಿದ್ಯಾಲಯದ ವಿವಿಧ ಎಲ್ಲಾ ಟೆಂಡರ್ ಪ್ರಕ್ರಿಯೆಯ ಎಲ್ಲ ಕಡತಗಳನ್ನು ಕುಲಸಚಿವರು(ಆಡಳಿತ) ಮೂಲಕ ನಡೆಸುವ ಪ್ರಕ್ರಿಯೆ ಮುಂದುವರೆಸುವ ಬಗ್ಗೆ ಪ್ರಸ್ತಾಪಿಸಲಾಗಿ, ಸಭೆಯು ಅನುಮೋದಿಸಿತು.<br>ದಿನಾಂಕ 07.02.2025 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ಗೊತ್ತುವಳಿಗಳ ಅನುಪಾಲನಾ ವರದಿಯನ್ನು ಸಭೆಯು ಪರಿಶೀಲಿಸಿ ಧೃಢೀಕರಿಸಿತು. |
| 02 | 2025/03/02 | 2024-25ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ವ್ಯವಹಾರ ನಿರ್ವಹಣಾಶಾಸ್ತ್ರ ವಿಭಾಗದ ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸಲು ರಚಿಸಲಾದ ಪರೀಕ್ಷಕರ ಮಂಡಳಿಗೆ ಅನುಸಮರ್ಥನೆ ಕೋರಿ. |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2024-25 ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ವ್ಯವಹಾರ ನಿರ್ವಹಣಾಶಾಸ್ತ್ರ ವಿಭಾಗದ ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸಲು ಮಾನ್ಯ ಕುಲಪತಿಗಳ ಅಧ್ಯಕ್ಷತೆಯ ಪರೀಕ್ಷಕರ ನೇಮಕಾತಿ ಮಂಡಳಿಯು ದಿನಾಂಕ: 08.03.2025 ರಂದು ಸಭೆ ನಡೆಸಿ ಸಲ್ಲಿಸಿದ ನಡಾವಳಿಯನ್ವಯ ಸಿಂಡಿಕೇಟ್ ಸಭೆಯ ಅನುಸಮರ್ಥನೆ ಕಾಯ್ದಿರಿಸಿ ಪರೀಕ್ಷಕರ ಮಂಡಳಿಯನ್ನು ಗೌಪ್ಯ ಆದೇಶ ಸಂಖ್ಯೆ: ರಾಚವಿ/ಪವಿಂ04/ಬೆಳಗಾವಿ/2024-25/7483, ದಿನಾಂಕ: 08.03.2025 ರ ಮೂಲಕ ರಚಿಸಿ ಆದೇಶಿಸಲಾಗಿದೆ. ಸದರಿ ಪರೀಕ್ಷಕರ ನೇಮಕಾತಿ ಮಂಡಳಿಯ ನಡಾವಳಿಗೆ ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು ಹಾಗೂ ಸ್ನಾತಕೋತ್ತರ ವ್ಯವಹಾರ ನಿರ್ವಹಣಾಶಾಸ್ತ್ರ ವಿಭಾಗದ ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸಲು ಪರೀಕ್ಷಕರ ಮಂಡಳಿ ರಚಿಸಿದ ಕ್ರಮಕ್ಕೆ ಅನುಸಮರ್ಥನೆ ನೀಡಲಾಯಿತು. |
| 03 | 2025/03/03 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 13ನೇ ಘಟಿಕೋತ್ಸವದಲ್ಲಿ ಸ್ನಾತಕ, ಸ್ನಾತಕೋತ್ತರ ವಿದ್ಯಾರ್ಥಿಗಳ ರ್‍ಯಾಂಕ್ ಪಟ್ಟಿಯನ್ನು ಪ್ರಕಟಿಸಿದ ಕುರಿತು. |
| | ತೀರ್ಮಾನ | ರಾಣಿ ಚನಮ್ಮ ವಿಶ್ವವಿದ್ಯಾಲಯದ 13ನೇ ಘಟಿಕೋತ್ಸವವು ದಿನಾಂಕ: 07.04.2025 ರಂದು ಜರುಗಲಿರುವುದರಿಂದ 2023-24ನೇ ಸಾಲಿನ ಸ್ನಾತಕ ಮತ್ತು ಸ್ನಾತಕೋತ್ತರ ವಿಭಾಗಗಳಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳ ರ್‍ಯಾಂಕ್ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ತುರ್ತಾಗಿ ಪ್ರಕಟಿಸಲಾಗಿದೆ. ಕಾರಣ, ಸದರಿ ವಿಷಯಕ್ಕೆ ಸಿಂಡಿಕೇಟ್ ಸಭೆಯು ಅನುಸಮರ್ಥನೆ ನೀಡಿತು. |
| 04 | 2025/03/04 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 13ನೇ ಘಟಿಕೋತ್ಸವದಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರಗಳನ್ನು ವಿತರಿಸುವ ಕುರಿತು. |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಪ್ರಾರಂಭದಿಂದ ಇಲ್ಲಿಯವರೆಗೆ ನಡೆದ ಎಲ್ಲ ಘಟಿಕೋತ್ಸವದಲ್ಲಿ First Session ನಲ್ಲಿ ಪ್ರಥಮ ರ್‍ಯಾಂಕ್ ಪಡೆದ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಮತ್ತು ಪ್ರಥಮ ಅಧಿಸೂಚನೆಗೊಂಡಿರುವ ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರಗಳನ್ನು ನೀಡಲಾಗಿದೆ ಹಾಗೂ ಇನ್ನುಳಿದ ರ್‍ಯಾಂಕ್ ವಿದ್ಯಾರ್ಥಿಗಳಿಗೆ ಮತ್ತು ನಂತರ ಅಧಿಸೂಚನೆಗೊಂಡಿರುವ ಎಲ್ಲ ಪಿಎಚ್.ಡಿ. ಸಂಶೋಧನಾ ಅಭ್ಯರ್ಥಿಗಳಿಗೆ Second Session ನಲ್ಲಿ ಪದವಿ ಪ್ರಮಾಣ ಪತ್ರಗಳನ್ನು ವಿತರಿಸಲಾಗಿದೆ. ಮುಂದುವರೆದು, 13 ನೇ ವಾರ್ಷಿಕ ಘಟಿಕೋತ್ಸವದಲ್ಲಿ First Session ನಲ್ಲಿ 2023-24ನೇ ಶೈಕ್ಷಣಿಕ ವರ್ಷದ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಮತ್ತು ಅಧಿಸೂಚನೆಗೊಂಡಿರುವ ಎಲ್ಲ ಪಿಎಚ್.ಡಿ. ಸಂಶೋಧನಾ ಅಭ್ಯರ್ಥಿಗಳಿಗೆ ಪದವಿ ಪ್ರಮಾಣ ಪತ್ರಗಳನ್ನು ವಿತರಿಸಲು ಸಭೆಯು ಅನುಮೋದನೆ ನೀಡಿತು ಹಾಗೂ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರುವುದರಿಂದ 13 ನೇ ವಾರ್ಷಿಕ ಘಟಿಕೋತ್ಸವವನ್ನು ಒಂದೇ Session ನಲ್ಲಿ ನಡೆಸಲು ಸಭೆಯು ತೀರ್ಮಾನಿಸಿತು. |
| 05 | 2025/03/05 | ಸೆಪ್ಟೆಂಬರ್/ಅಕ್ಟೋಬರ್-2024 ರಲ್ಲಿ ಜರುಗಿದ 2, 4 ಹಾಗೂ 6ನೇ ಸೆಮಿಸ್ಟರ್ ಮತ್ತು ಡಿಸೆಂಬರ್/ಜನವರಿ-2025 ರಲ್ಲಿ ಜರುಗಿದ 1, 3 ಹಾಗೂ 5 ನೇ ಸೆಮಿಸ್ಟರ್ ಸ್ನಾತಕ ಪದವಿಯ ಪರೀಕ್ಷೆಗಳಲ್ಲಿ MPLEC ನಕಲು ವಿಚಾರಣಾ ಸಮಿತಿಯು ಮಾಡಿದ ಶಿಫಾರಸ್ಸುಗಳನ್ನು ಹಾಗೂ ವರದಿಯನ್ನು ಸಿಂಡಿಕೇಟ್ ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸುವ ಕುರಿತು. |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸೆಪ್ಟೆಂಬರ್/ಅಕ್ಟೋಬರ್-2024 ರಲ್ಲಿ ಜರುಗಿದ 2, 4 ಹಾಗೂ 6ನೇ ಸೆಮಿಸ್ಟರ್ ಮತ್ತು ಡಿಸೆಂಬರ್/ಜನವರಿ-2025 ರಲ್ಲಿ ಜರುಗಿದ 1, 3 ಹಾಗೂ 5 ನೇ ಸೆಮಿಸ್ಟರ್ ಸ್ನಾತಕ ಪದವಿಯ ಪರೀಕ್ಷೆಗಳಲ್ಲಿ MPLEC ನಕಲು ಆರೋಪ ಹೊಂದಿರುವ ಸ್ನಾತಕ |

| | | |
|---|---|---|
| | | ಪದವಿಯ ವಿದ್ಯಾರ್ಥಿಗಳನ್ನು ದಿನಾಂಕ: 17.02.2025 ರಿಂದ 18.02.2025 ರವರೆಗೆ MPLEC ನಕಲು ವಿಚಾರಣಾ ಸಮಿತಿಯು ವಿಚಾರಣೆ ನಡೆಸಿ, ನಕಲು ಪ್ರಕರಣದಲ್ಲಿ ಭಾಗಿಯಾದ ವಿದ್ಯಾರ್ಥಿಗಳಿಗೆ ದಂಡ ಶುಲ್ಕ ಹಾಗೂ ಶಿಸ್ತು ಕ್ರಮಗಳನ್ನು ಕೈಗೊಳ್ಳುವಂತೆ ಶಿಫಾರಸ್ಸು ಮಾಡಿ ಸಲ್ಲಿಸಿರುವ ವರದಿಯನ್ನು ಸಭೆಗೆ ಪ್ರಸ್ತುತಪಡಿಸಲಾಯಿತು. ಪರಿಶೀಲಿಸಿದ ಸಭೆಯು ಘಟನೋತ್ತರ ಅನುಮತಿ ನೀಡಿ ವರದಿಯಂತೆ ಕ್ರಮ ಕೈಗೊಳ್ಳಲು ತೀರ್ಮಾನಿಸಿತು. |
| 06 | 2025/03/06 | 2024-25 ನೇ ಶೈಕ್ಷಣಿಕ ಸಾಲಿನಲ್ಲಿ ಮತ್ತು ತದನಂತರದ ಸಾಲಿನಲ್ಲಿ ಜರುಗುವ ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷೆಗಳಿಗಾಗಿ ಅವಶ್ಯವಿರುವ 36 ಪುಟದ ಉತ್ತರ ಪತ್ರಿಕೆಗಳನ್ನು ಮುದ್ರಿಸಿ ಸರಬರಾಜು ಮಾಡಿಸಿಕೊಳ್ಳಲು ಸಭೆಯ ಅನುಮೋದನೆಗೆ ಮಂಡಿಸಿದ ಕುರಿತು. |
| ತೀರ್ಮಾನ | | 2024-25 ನೇ ಸಾಲಿನಲ್ಲಿ NEP ಪಠ್ಯಕ್ರಮದ ಜೊತೆಗೆ SEP ಪಠ್ಯಕ್ರಮವು ಅನ್ವಯವಾಗುವುದರಿಂದ SEP & Non-NEP ವಿವಿಧ ಸ್ನಾತಕ ಪದವಿ ಬಿ.ಎಡ್, ಬಿಪಿಎಡ್, ವಿವಿಧ ಸ್ನಾತಕೋತ್ತರ ಹಾಗೂ ಸುವರ್ಣವಕಾಶ ಪರೀಕ್ಷೆಗಳನ್ನು ನಡೆಸಲು ಪ್ರಸ್ತುತ 58800, 36 ಪುಟದ ಮುಖ್ಯ ಉತ್ತರ ಪತ್ರಿಕೆಗಳು ಲಭ್ಯವಿದ್ದು ಇನ್ನು 3.60 ಲಕ್ಷಗಳ 36 ಪುಟದ ಪತ್ರಿಕೆಗಳನ್ನು ಮುದ್ರಿಸುವುದು ಅವಶ್ಯವಿರುತ್ತದೆ ಹಾಗೂ ಒಂದು ಸೆಮೆಸ್ಟರ್‌ನ ಪರೀಕ್ಷೆಗೆ ಅಂದಾಜು ರೂ.64,80,000/-ಗಳ ತಗುಲಬಹುದಾಗಿದೆ ಎಂದು ಕುಲಸಚಿವರು(ಮೌ) ಸಭೆಗೆ ಮಾಹಿತಿ ನೀಡಿದರು. ಮುಂದುವರೆದು, ಅರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಆಇ749 ವೆಚ್ಚ 12/11 ಬೆಂಗಳೂರು ದಿನಾಂಕ: 05.09.2011 ರನ್ವಯ ಹಾಗೂ ಉನ್ನತ ಶಿಕ್ಷಣ ಇಲಾಖೆ ಕ್ರಮಾಂಕ ಇಡಿ168 ಯುಆರ್‌ಸಿ 2011 ಬೆಂಗಳೂರು ದಿನಾಂಕ: 13.12.2011 ರನ್ವಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯಕ್ಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 1999ರ ಕಲಂ 4(ಜಿ) ರನ್ವಯ ಪರೀಕ್ಷೆಗೆ ಸಂಬಂಧಿಸಿದ ಕಾರ್ಯಗಳಿಗೆ 4(ಜಿ) ವಿನಾಯಿತಿ ಇರುತ್ತದೆ ಎಂದರು.<br><br>ಪರಿಶೀಲಿಸಿದ ಸಭೆಯು, 2024-25ನೇ ಶೈಕ್ಷಣಿಕ ಸಾಲಿನಲ್ಲಿ ಮತ್ತು ತದನಂತರದ ಸಾಲಿನಲ್ಲಿ ಜರುಗುವ ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷೆಗಳಿಗಾಗಿ ಅವಶ್ಯವಿರುವ 3.60 ಲಕ್ಷ 36 ಪುಟದ ಮುಖ್ಯ ಉತ್ತರ ಪತ್ರಿಕೆಗಳನ್ನು 4(ಜಿ) ಅಡಿಯಲ್ಲಿ (ಒಂದು ಸೆಮೆಸ್ಟರ್‌ನ ಪರೀಕ್ಷೆಗೆ) ಮುದ್ರಣ, ಪರೀಕ್ಷಾ ಕೇಂದ್ರಗಳಿಗೆ ಸರಬರಾಜು ಮಾಡುವುದು ಹಾಗೂ ಉತ್ತರ ಪತ್ರಿಕೆಗಳ ಮೌಲ್ಯಮಾಪನಕ್ಕೆ ಸಂಬಂಧಿಸಿದ ಕಾರ್ಯಗಳನ್ನು ಕೈಗೊಳ್ಳಲು ದರಪಟ್ಟಿಗಳನ್ನು ಆಹ್ವಾನಿಸಿ ಕಡಿಮೆ ಬಿಡ್‌ದಾರರಿಗೆ ಆದೇಶ ಹೊರಡಿಸಲು ಸಭೆಯು ಅನುಮೋದನೆ ನೀಡಿತು.<br><br>ಮುಂದುವರೆದು, ಈಗಾಗಲೇ ಹಿಂದಿನ ಶೈಕ್ಷಣಿಕ ಸಾಲಿನಲ್ಲಿ NEP ಪಠ್ಯಕ್ರಮದಡಿ ಜರುಗಿದ 32 ಪುಟದ ಮುಖ್ಯ ಉತ್ತರ ಪತ್ರಿಕೆಗಳ ಮುದ್ರಿಸಿದ ಸಂಖ್ಯೆ, ಉಪಯೋಗಿಸಿದ ಹಾಗೂ ಬಾಕಿ ಉಳಿದಿರುವ ಸಂಖ್ಯೆ ಮತ್ತು ಖರ್ಚು-ವೆಚ್ಚದ ಮಾಹಿತಿಯನ್ನು ಮುಂದಿನ ಸಭೆಯಲ್ಲಿ ಮಂಡಿಸಲು ಕುಲಸಚಿವರು(ಮೌ) ಇವರಿಗೆ ಸಭೆಯು ಸೂಚಿಸಿತು. |
| 07 | 2025/03/07 | ನಾನ್-ಯು.ಯು.ಸಿ.ಎಮ್.ಎಸ್. ಅಡಿಯಲ್ಲಿ ಬರುವ ವಿವಿಧ ಸ್ನಾತಕ, ಸ್ನಾತಕೋತ್ತರ ಬಿ.ಎಡ್, ಬಿಪಿ.ಎಡ್ ಡಿಪ್ಲೋಮಾ ರಿಪಿಟರ್ ವಿದ್ಯಾರ್ಥಿಗಳ ಮತ್ತು ಪಿಹೆಚ್.ಡಿ. ವಿದ್ಯಾರ್ಥಿಗಳ ಪರೀಕ್ಷೆಗಳ ಪರೀಕ್ಷಾ ಕಾರ್ಯಗಳನ್ನು ಕೈಗೊಳ್ಳುವ ಕುರಿತು. |
| ತೀರ್ಮಾನ | | ಸರ್ಕಾರದ ನಿರ್ದೇಶನ ಮತ್ತು ಈ ಹಿಂದಿನ ಸಿಂಡಿಕೇಟ್ ಸಭೆಯ ತೀರ್ಮಾನದಂತೆ ನಾನ್-ಯು.ಯು.ಸಿ.ಎಮ್.ಎಸ್. ಅಡಿಯಲ್ಲಿ ಬರುವ ವಿವಿಧ ಸ್ನಾತಕ, ಸ್ನಾತಕೋತ್ತರ ಬಿ.ಎಡ್, ಬಿಪಿ.ಎಡ್ ಡಿಪ್ಲೋಮಾ ರಿಪಿಟರ್ ವಿದ್ಯಾರ್ಥಿಗಳ ಮತ್ತು ಪಿಹೆಚ್.ಡಿ. ವಿದ್ಯಾರ್ಥಿಗಳ ಪರೀಕ್ಷಾ ಕಾರ್ಯವನ್ನು Logisys, Bengaluru ಹಾಗೂ Uniclare, Bengaluru ರವರ ತಂತ್ರಾಂಶದ ಮೂಲಕ 06 ತಿಂಗಳ ಒಪ್ಪಂದ ಮಾಡಿಕೊಂಡು ಪರೀಕ್ಷಾ ಫಲಿತಾಂಶಕ್ಕೆ ಕ್ರಮ ಕೈಗೊಳ್ಳಲಾಗಿದೆ. ಮುಂದುವರೆದು, ಸದರಿ ಒಪ್ಪಂದವು ದಿನಾಂಕ: 08.11.2024 ರಂದು ಮುಕ್ತಾಯವಾಗಿದ್ದರಿಂದ ಈ ಕುರಿತಾಗಿ ಸರ್ಕಾರದ ನಿರ್ದೇಶನ ಕೋರಿ ಪತ್ರ ಬರೆಯಲಾಗಿತ್ತು. ಪ್ರತ್ಯುತ್ತರವಾಗಿ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಆದೇಶ ಸಂಖ್ಯೆ: ಇಡಿ |

| | | |
|---|---|---|
| | | 09 ಇಜಿಐವಿ 2023, ದಿನಾಂಕ: 19.11.2024 ರ ಆದೇಶದಲ್ಲಿ ಈ ಹಿಂದಿನಂತೆ ಮುಂದಿನ ಸೂಚನೆವರೆಗೆ ಮುಂದುವರೆಸಿಕೊಂಡು ಹೋಗುವಂತೆ ತಿಳಿಸಿರುತ್ತಾರೆ ಎಂಬ ಮಾಹಿತಿಯನ್ನು ಕುಲಸಚಿವರು(ಮೌ) ಸಭೆಗೆ ನೀಡಿದರು.<br><br>ಕಾರಣ, ಸರ್ಕಾರದ ನಿರ್ದೇಶನದಂತೆ, 2021-22, 2022-23 ಮತ್ತು 2023-24 ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶ ಪಡೆದು ಹಳೆಯ ತಂತ್ರಾಂಶ ಬಳಕೆಯಲ್ಲಿ ನೋಂದಣಿಯಾಗಿ ಅನುತ್ತೀರ್ಣರಾದ ಸ್ನಾತಕ, ಸ್ನಾತಕೋತ್ತರ, ಬಿ.ಎಡ್, ಬಿಪಿ.ಎಡ್, ಡಿಪ್ಲೋಮಾ ರಿಪಿಟರ್ ವಿದ್ಯಾರ್ಥಿಗಳ ಹಾಗೂ 2023-24 ನೇ ಸಾಲಿನಲ್ಲಿ ಪ್ರವೇಶ ಪಡೆದ ಪಿ.ಜಿ. ಡಿಪ್ಲೋಮಾ ಕೋರ್ಸ್‌ಗಳು ಮತ್ತು ಪಿಹೆಚ್.ಡಿ. ವಿದ್ಯಾರ್ಥಿಗಳ ಕೋರ್ಸಗಳು, UUCMS ನಲ್ಲಿ ವಿಶ್ವವಿದ್ಯಾಲಯದ ವಿದ್ಯಾಮಂಡಳ ವಿಭಾಗದಿಂದ ನಮೂದಾಗದಿರುವ ಕಾರಣ ಹಾಗೂ 2010 ರಿಂದ 2021 ರ ರವರೆಗೆ ಪ್ರವೇಶ ಪಡೆದು, ನಿಗದಿತ ಅವಧಿಯಲ್ಲಿ ಪದವಿ ಪೂರ್ಣಗೊಳಿಸದ ವಿದ್ಯಾರ್ಥಿಗಳಿಗೆ ಅನುತ್ತೀರ್ಣವಾಗಿರುವ ವಿಷಯಗಳಿಗೆ ಸುವರ್ಣಾವಕಾಶ ಪರೀಕ್ಷೆಗಳನ್ನು ನಡೆಸಲು ಹಾಗೂ ಫಲಿತಾಂಶ ಕಾರ್ಯಗಳನ್ನು Logisys, Bengaluru ಹಾಗೂ Uniclare, Bengaluru ರವರ ಮೂಲಕ ಒಪ್ಪಂದ ಮಾಡಿಕೊಂಡು ಕ್ರಮ ಕೈಗೊಳ್ಳಲು ಸಭೆಯು ಅನುಮೋದನೆ ನೀಡಿತು. |
| 08 | 2025/03/08 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 13ನೇ ಘಟಿಕೋತ್ಸವದ ಪ್ರಮಾಣ ಪತ್ರಗಳನ್ನು ಮುದ್ರಿಸಿ ವಿತರಿಸುವ ಕುರಿತು. |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 9, 10, 11 ಮತ್ತು 12 ನೇ ಘಟಿಕೋತ್ಸವದ ಪ್ರಮಾಣ ಪತ್ರಗಳನ್ನು 2024-25ನೇ ಸಾಲಿನಲ್ಲಿ ಮುದ್ರಿಸಿ ಆಯಾ ಮಹಾವಿದ್ಯಾಲಯಗಳಿಗೆ ವಿತರಿಸುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಅದೇ ರೀತಿ 13ನೇ ಘಟಿಕೋತ್ಸವದ ಪ್ರಮಾಣ ಪತ್ರಗಳನ್ನು ಕೂಡ ಮುದ್ರಣ ಮಾಡಿ ಘಟಿಕೋತ್ಸವದ ನಂತರ ಮಹಾವಿದ್ಯಾಲಯಗಳಿಗೆ ವಿತರಿಸುವ ವಿಷಯಕ್ಕೆ ಸಭೆಯು ಅನುಮೋದನೆ ನೀಡಿತು. |
| 09 | 2025/03/09 | 2025-26ನೇ ಶೈಕ್ಷಣಿಕ ಸಾಲಿನಲ್ಲಿ ಜರುಗುವ ಪ್ರಾಯೋಗಿಕದ ವಿಷಯದ ಕೋರ್ಸಗಳಿಗೆ ಪರೀಕ್ಷಾ ಶುಲ್ಕವನ್ನು ಹೆಚ್ಚಿಸುವ ಬಗ್ಗೆ ಚರ್ಚಿಸುವ ಕುರಿತು. |
| | ತೀರ್ಮಾನ | 2024-25ನೇ ಶೈಕ್ಷಣಿಕ ಸಾಲಿಗಾಗಿ ದಿನಾಂಕ: 10.09.2024 ರಂದು ನಡೆದ ಸ್ನಾತಕ ಸ್ನಾತಕೋತ್ತರ ಕೋರ್ಸ್‌ಗಳಿಗೆ ಸಂಬಂಧಿಸಿದ ಶುಲ್ಕ ಪರಿಷ್ಕರಣಾ ಹಾಗೂ ಪರೀಕ್ಷಾ ಸಂಭಾವನೆ ನಿಗದಿಪಡಿಸುವ ಸಮಿತಿ ಸಭೆಯಲ್ಲಿ ಪ್ರಾಯೋಗಿಕ ವಲ್ಲದ ಕೋರ್ಸಗಳಿಗೆ ಶೇ. 20 ರಷ್ಟು ಹಾಗೂ ಪ್ರಾಯೋಗಿಕ ವಿಷಯದ ಕೋರ್ಸಗಳಿಗೆ ಶೇ. 25 ರಷ್ಟು ಪರೀಕ್ಷಾ ಶುಲ್ಕವನ್ನು ಈಗಾಗಲೇ ಹೆಚ್ಚಿಸಲಾಗಿದೆ. ಕಾರಣ, 2025-26ನೇ ಶೈಕ್ಷಣಿಕ ಸಾಲಿನಲ್ಲಿ ಜರುಗುವ ಪ್ರಾಯೋಗಿಕ ವಿಷಯದ ಕೋರ್ಸಗಳಿಗೆ ಸಂಬಂಧಿಸಿದಂತೆ ಪರೀಕ್ಷಾ ಶುಲ್ಕವನ್ನು ಹೆಚ್ಚಿಸುವ ಕುರಿರು ಕುಲಸಚಿವರು(ಮೌ) ಸಭೆಯ ಮಾರ್ಗದರ್ಶನ ಕೋರಿದರು.<br><br>ಸದಸ್ಯರಾದ ಶ್ರೀ ಮಹಾಂತೇಶ ಕಂಬಾರ ಇವರು ಮಾತನಾಡಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಶೇ. 5 ರಿಂದ ಶೇ. 10 ರವರೆಗೆ ಮಾತ್ರ ಹೆಚ್ಚಿಸಲು ಮನವಿ ಮಾಡಿದರು.<br><br>ಚರ್ಚಿಸಿದ ಸಭೆಯು, ರಾಜ್ಯದ ಬೇರೆ ಬೇರೆ ವಿಶ್ವವಿದ್ಯಾಲಯಗಳು ಪ್ರಾಯೋಗಿಕ ವಿಷಯಗಳಿಗೆ ವಿಧಿಸುವ ಪರೀಕ್ಷಾ ಶುಲ್ಕವನ್ನು ಪರಿಶೀಲಿಸುವುದು ಹಾಗೂ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಬೇರೆ ವಿಶ್ವವಿದ್ಯಾಲಯಗಳಿಂದ ಕಡಿಮೆ ಶುಲ್ಕವನ್ನು ನಿಗದಿಪಡಿಸಲು ಸಭೆಯು ತೀರ್ಮಾನಿಸಿತು. ಅಲ್ಲಿಯವರೆಗೆ ಶೇಕಡಾ 10 ರಷ್ಟು ಪ್ರಾಯೋಗಿಕ ಪರೀಕ್ಷೆಗಳಿಗೆ ಶುಲ್ಕವನ್ನು ಹೆಚ್ಚಿಸಲು ಸಭೆ ಅನುಮತಿ ನೀಡಿತು. ಮುಂದುವರೆದು ಪ್ರವೇಶಾತಿ ಹೆಚ್ಚಿಸಿದ ಶುಲ್ಕವನ್ನು ಪ್ರವೇಶಾತಿ ಸಮಯದಲ್ಲಿಯೇ ವಿದ್ಯಾರ್ಥಿಗಳ ಗಮನಕ್ಕೆ ತರಲು ಸಭೆಯು ಸೂಚಿಸಿತು. |
| 10 | 2025/03/10 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ ವಿವಿಧ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಮತ್ತು ಸಂಶೋಧನಾ ಅಧ್ಯಯನ ಮಾಡಲು ಅನುಮತಿ ನೀಡಿರುವುದಕ್ಕೆ ಸಿಂಡಿಕೇಟ್ ಸಭೆಯ ಅನುಸಮರ್ಥನೆಗೆ ಮಂಡಿಸಿರುವ ಕುರಿತು. |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಈ ಕೆಳಕಾಣಿಸಿದ ಬೋಧಕ ಸಿಬ್ಬಂದಿಗಳಿಗೆ ವಿವಿಧ ಹುದ್ದೆಗಳಲ್ಲಿ ಅರ್ಜಿ ಸಲ್ಲಿಸಲು ನಿರಾಕ್ಷೇಪಣಾ ಪ್ರಮಾಣ ಪತ್ರ, ಸೇವಾ |

ಪ್ರಮಾಣ ಪತ್ರ ಹಾಗೂ ವಿಜಿಲೆನ್ಸ ಪತ್ರ ನೀಡಿರುವುದ್ದಕ್ಕೆ ಮತ್ತು ಸಂಶೋಧನಾ ಅಧ್ಯಯನ ಮಾಡಲು ಅನುಮತಿ(NoC) ನೀಡಿರುವುದ್ದಕ್ಕೆ ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಸಮರ್ಥನೆ ನೀಡಿತು.

| Sl No | Name of the Teaching Staff | Details of permission to apply | Post applied/Subject |
|---|---|---|---|
| ನಿರಾಕ್ಷೇಪಣಾ ಪ್ರಮಾಣ ಪತ್ರ, ಸೇವಾ ಪ್ರಮಾಣ ಪತ್ರ ಹಾಗೂ ವಿಜಿಲೆನ್ಸ್ ಪತ್ರ ನೀಡಿದ ವಿವರ. | | | |
| 1 | Prof. Vijay F. Nagannawar Senior Professor, Department of English. | Karnataka University, Dharwad<br>Gulbaraga University, Kalaburagi<br>Raichur University, Raichur<br>Central Tribal University of Andhra Pradesh, Kondakarakam. | Vice-Chancellor |
| 2 | Prof. BasavarajPadmashali Senior Professor, Department of Chemistry | Karnataka University, Dharwad<br>Gulbaraga University, Kalaburagi<br>Raichur University, Raichur | Vice-Chancellor |
| 3 | Prof. Doddanagouda N Patil, Senior Professor, Department of Economics | Karnataka University, Dharwad<br>Raichur University, Raichur | Vice-Chancellor |
| 4 | Prof.SidramBasappaAkash, Professor Department of Commerce | Dr. B. R. Ambedkar School of Economics University, Bangalore<br>Karnataka University, Dharwad<br>Gulbaraga University, Kalaburagi<br>Raichur University, Raichur | Vice-Chancellor |
| 5 | Prof. S. M. Gangadharaiah, Professor, Depart ment of Classical Kannada. | Dr.GangubaiHangalSangeetha MattuPradarshakaKalegala University, Mysuru<br>Karnataka University, Dharwad<br>Gulbaraga University, Kalaburagi<br>Raichur University, Raichur | |
| 6 | Dr.Fayazz Ahmed H Ilkal Asssiatnt Professor Department of English Dr. P. G. Halakatti P. G .Centre Vijayapur. | Central university of Karnataka | Associate Professor |
| | | JamiaMilliaIlsamia University, New Delhi | Associate Professor & Professor |
| 7 | Dr.Bhavanishankar B Naik Deputy Librarian SRFGC College, Belagavi | National Institute of Technology Karnataka, Surathkal | Deputy Librarian |
| ಸಂಶೋಧನಾ ಅಧ್ಯಯನ ಮಾಡಲು ಅನುಮತಿ ನೀಡಿರುವ ವಿವರ. | | | |

| | | |
|---|---|---|
| 8 | Prof. B. G. Hegde<br>Professor<br>Department of Physics | Prof. Langens Lab, University of Southern California Los Angles, USA | Charge Ordering |
| 9 | Dr. P. M. Gurubasavaraj<br>Assistant Professor<br>Department of Chemistry | Dr. Masaki Horitan, Saga Univeristy, Japan | DST-JSPS Project |

| | | |
|---|---|---|
| 11 | 2025/03/11 | ಡಾ. ಪ್ರಕಾಶ ಕಟ್ಟಿಮನಿ, ಸಹ ಪ್ರಾಧ್ಯಾಪಕರು ಇವರನ್ನು ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ ನೇಮಕ ಮಾಡಿರುವ ಕುರಿತು. |
| ತೀರ್ಮಾನ | | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ. ಪ್ರಕಾಶ ಕಟ್ಟಿಮನಿ, ಇವರನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000 ರ 34(5)(7)(8) ನಿಯಮದ ಪ್ರಕಾರ ದಿನಾಂಕ: 03.03.2025 ರಿಂದ ಅನ್ವಯವಾಗುವಂತೆ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ ನೇಮಕ ಮಾಡಿ ಆದೇಶಿಸಲಾಗಿದೆ. ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯು ಅನುಸಮರ್ಥನೆ ನೀಡಿತು.** |
| 12 | 2025/03/12 | ತಾತ್ಕಾಲಿಕ ಸಂಚಿತ ವೇತನ ಆಧಾರದ ಮೇಲೆ ಸೇವೆಯನ್ನು ಸಲ್ಲಿಸುತ್ತಿರುವ ಸಿಬ್ಬಂದಿಗಳ ಸೇವೆಯನ್ನು ವಿದ್ಯಾರ್ಹತೆಯ ಅನುಗುಣವಾಗಿ ಮುಂದುವರೆಸಿರುವುದನ್ನು ಅನುಸಮರ್ಥನೆ ನೀಡುವ ಕುರಿತು. |
| ತೀರ್ಮಾನ | | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ತಾತ್ಕಾಲಿಕ ಸಂಚಿತ ವೇತನ ಆಧಾರದ ಮೇಲೆ ಸೇವೆಯನ್ನು ಸಲ್ಲಿಸುತ್ತಿರುವ ಸಿಬ್ಬಂದಿಗಳ ಸೇವೆಯನ್ನು ವಿದ್ಯಾರ್ಹತೆಯ ಅನುಗುಣವಾಗಿ ಪ್ರಥಮ ದರ್ಜೆ ಸಹಾಯಕರು ಮತ್ತು ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳಲ್ಲಿ ಆದೇಶ ಸಂ:ರಾಚವಿ/ಬೆಳಗಾವಿ/ಕುಸಕಾ/ಸಿಆಸುವಿ/2024-25/6767, ದಿನಾಂಕ: 12.02.2025 ರನ್ವಯ ಯಥಾಸ್ಥಿತಿಯಲ್ಲಿ ಮುಂದುವರೆಸಿರುವ ವಿಷಯಕ್ಕೆ ಸಭೆಯು ಪರಿಶೀಲಿಸಿ ಅನುಸಮರ್ಥನೆ ನೀಡಿತು.** |
| 13 | 2025/03/13 | ಉಳಿಕೆ ವೃಂದದ, ಪರಿಶಿಷ್ಟ ಪಂಗಡದ ಕಛೇರಿ ಅಧೀಕ್ಷಕ-01 ಹುದ್ದೆಯ ನೇಮಕಾತಿಗೆ ಸರ್ಕಾರದ ಆದೇಶದಂತೆ 03 ವರ್ಷಗಳ ವಯೋಮಿತಿ ಸಡಿಲಿಕೆ ನೀಡುವ ಕುರಿತು. |
| ತೀರ್ಮಾನ | | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇಲ್ಲಿ ಉಳಿಕೆ ವೃಂದದ ಪರಿಶಿಷ್ಟ ಪಂಗಡದ ಮೀಸಲಾತಿಯಲ್ಲಿ ಉಳಿದಿರುವ ಕಛೇರಿ ಅಧೀಕ್ಷಕರ-01 ಹುದ್ದೆಯನ್ನು ನೇಮಕಾತಿ ಮಾಡಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಿ ಅಧಿಸೂಚನೆ ಪ್ರಕಟಿಸಲಾಗಿರುತ್ತದೆ. ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ; ಸಿಆಸುಇ 166 ಸೆನೆನಿ 2024 ಬೆಂಗಳೂರು ದಿನಾಂಕ: 10.09.2024 ರನ್ವಯ ಒಂದು ಬಾರಿಗೆ ಅನ್ವಯವಾಗುವಂತೆ 03 ವರ್ಷಗಳ ವಯೋಮಿತಿ ಸಡಿಲಿಕೆ ಮಾಡುವಂತೆ ಆದೇಶಿಸಿರುತ್ತಾರೆ. ಆದ್ದರಿಂದ, ಪ್ರಸ್ತುತ ಪ್ರಕಟಿಸಿರುವ ಕಛೇರಿ ಅಧೀಕ್ಷಕರ-01 ಹುದ್ದೆಯಲ್ಲಿ ಸದರಿ 03 ವರ್ಷದ ವಯೋಮಿತಿ ಸಡಿಲಿಕೆಯನ್ನು ಅಳವಡಿಸಲಾಗಿರುವ ವಿಷಯವನ್ನು ಸಭೆಯ ಗಮನಕ್ಕೆ ತರಲಾಯಿತು. ಪರಿಶೀಲಿಸಿದ ಸಭೆಯು ಸದರಿ ವಿಷಯಕ್ಕೆ ಅನುಸಮರ್ಥನೆ ನೀಡಿತು.** |
| 14 | 2025/03/14 | ಶ್ರೀಮತಿ ರಮಾ ಗಲಗಲಿ, ಪ್ರಥಮ ದರ್ಜೆ ಸಹಾಯಕರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇವರಿಗೆ ನಿವೃತ್ತ ಸೌಲಭ್ಯಗಳನ್ನು ನೀಡಲು ಅನುಮೋದನೆ ನೀಡುವ ಕುರಿತು. |
| ತೀರ್ಮಾನ | | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀಮತಿ ರಮಾ ಗಲಗಲಿ ಇವರು ಕರ್ನಾಟಕ ಸಿವಿಲ್ ಸೇವಾ ನಿಯಮಗಳು 252(ಬಿ) ರನ್ವಯ ಪ್ರಥಮ ದರ್ಜೆ ಸಹಾಯಕ ಹುದ್ದೆಗೆ ದಿನಾಂಕ: 06.01.2025 ರಿಂದ ಅನ್ವಯಿಸುವಂತೆ ಸ್ವ-ಇಚ್ಛೆಯಿಂದ ರಾಜೀನಾಮೆ ನೀಡಿ ತಮಗೆ ಸಿಗಬೇಕಾದ ಆರ್ಥಿಕ ಸೌಲಭ್ಯಗಳನ್ನು ತನ್ನ ಉಳಿತಾಯ ಖಾತೆಗೆ ಜಮೆ ಮಾಡುವಂತೆ ವಿನಂತಿಸಿಕೊಂಡಿರುತ್ತಾರೆ. ಅದರಂತೆ ಸಂಬಂಧಿಸಿದ ವಿಭಾಗಗಳಿಂದ ಬೇಬಾಕಿ ಪ್ರಮಾಣ ಪತ್ರವನ್ನು ಪಡೆದುಕೊಂಡು ಸಿಂಡಿಕೇಟ್ ಸಭೆಯ ಅನುಮೋದನೆ ಕಾಯ್ದಿರಿಸಿ, ಕರ್ನಾಟಕ ಸಿವಿಲ್ ಸೇವಾ ನಿಯಮಗಳು 252(ಬಿ) ರನ್ವಯ ಪ್ರಥಮ ದರ್ಜೆ ಸಹಾಯಕ ಹುದ್ದೆಯಿಂದ ಬಿಡುಗಡೆಗೊಳಿಸಿ ಆದೇಶಿಸಲಾಗಿದೆ.ಸದರಿಯವರು 10 ವರ್ಷ ಸೇವಾವಧಿ ಪೂರ್ಣಗೊಳಿಸಿದ್ದರಿಂದ ನಿಯಮಾನುಸಾರ ನಿವೃತ್ತಿ ಸೌಲಭ್ಯಗಳನ್ನು ನೀಡಲು ಸಭೆಯ ಅನುಮೋದನೆ ಕೋರಲಾಯಿತು. ಪರಿಶೀಲಿಸಿದ ಸಭೆಯು ಕರ್ನಾಟಕ ಸಿವಿಲ್ ಸೇವಾ ನಿಯಮಗಳು ಮತ್ತು ಸರ್ಕಾರದ ಆದೇಶದಂತೆ ನಿವೃತ್ತಿ ಸೌಲಭ್ಯಗಳನ್ನು ಮಂಜೂರು ಮಾಡಲು ಸಭೆಯು ಅನುಮೋದನೆ ನೀಡಿತು.** |

| | | |
|---|---|---|
| 15 | 2025/03/15 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಖಾಯಂ ಬೋಧಕ/ಬೋಧಕೇತರ ಸಿಬ್ಬಂದಿಗಳ ಅಂತರ ವಿಶ್ವವಿದ್ಯಾಲಯ ವರ್ಗಾವಣೆ ಕುರಿತಾಗಿ ರಚಿಸಲಾದ ಉಪಸಮಿತಿ ವರದಿ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಅಂತರ ವಿಶ್ವವಿದ್ಯಾಲಯ ವರ್ಗಾವಣೆಗೆ ಸಲ್ಲಿಸಿದ ಅರ್ಜಿಗಳನ್ನು ಪರಿಶೀಲಿಸಿ ವರದಿ ಸಲ್ಲಿಸಲು ಉಪ ಸಮಿತಿಯನ್ನು ರಚಿಸಲಾಗಿತ್ತು. ಸದರಿ ಉಪ ಸಮಿತಿಯು ದಿನಾಂಕ: **10.03.2025** ರಂದು ಸಭೆ ಜರುಗಿಸಿ ಅರ್ಜಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಭೆಯ ಅನುಮೋದನೆಗಾಗಿ ಮಂಡಿಸಲಾಯಿತು.<br>ವರದಿಯನ್ನು ಪರಿಶೀಲಿಸಿದ ಸಭೆಯು, ಒಟ್ಟು **06** ಮನವಿಗಳಲ್ಲಿ ಓರ್ವ ಬೋಧಕೇತರ ಸಿಬ್ಬಂದಿಯಾದ ಶ್ರೀ ಪ್ರತಾಪ.ವಿ.ಎಲ್., ಗಣಕಯಂತ್ರ ನಿರ್ವಾಹಕರು ಇವರ ತಾಯಿಯು ಕ್ಯಾನ್ಸರನಿಂದ ಬಳಲುತ್ತಿರುವುದರಿಂದ **Genuine Reason** ಎಂದು ಪರಿಗಣಿಸಿ ಒಬ್ಬರಿಗೆ ಮಾತ್ರ ಅಂತರ ವಿಶ್ವವಿದ್ಯಾಲಯ ವರ್ಗಾವಣೆ ಮಾಡಲು ಸಕಾರಾತ್ಮಕವಾಗಿ ಶಿಫಾರಸ್ಸು ಮಾಡಿರುತ್ತದೆ. ಕಾರಣ, ಉಪಸಮಿತಿಯು ಸಲ್ಲಿಸಿದ ವರದಿಯಂತೆ ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿತು.<br>ಮುಂದುವರೆದು, **Genuine Reason** ಎಂದು ಪರಿಗಣಿಸಲು ಯಾವುದೇ ನಿರ್ದಿಷ್ಟವಾದ ಮಾನದಂಡವಿಲ್ಲವಾದ ಕಾರಣ ಮುಂದಿನ ದಿನಗಳಲ್ಲಿ ಅಂತರ ವಿಶ್ವವಿದ್ಯಾಲಯ ವರ್ಗಾವಣೆಗೆ ಸಂಬಂಧಿಸಿದ ಮನವಿಗಳನ್ನು ನೇರವಾಗಿ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲು ಸೂಚಿಸಿತು ಹಾಗೂ ಪ್ರಸ್ತುತ ಇರುವ ಉಪಸಮಿತಿಯನ್ನು ರದ್ದುಪಡಿಸಲು ಸಭೆಯು ತೀರ್ಮಾನಿಸಿತು. |
| 16 | 2025/03/16 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಗಳು ಗೈರು ಹಾಜರಿ ಇದ್ದ ಪ್ರಯುಕ್ತ ಶಿಸ್ತು ಕ್ರಮ ಕೈಗೊಳ್ಳುವ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ **05** ಜನ ಬೋಧಕೇತರ ಸಿಬ್ಬಂದಿಗಳು ತಮ್ಮ ಕರ್ತವ್ಯಕ್ಕೆ ಪದೇ ಪದೇ ಗೈರು ಹಾಜರಾಗುತ್ತಿರುವುದರಿಂದ ಇಲಾಖಾ ವಿಚಾರಣಾ ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ವಿಚಾರಣೆ ನಡೆಸಿ ಸಲ್ಲಿಸಿರುವ ವರದಿಯನ್ನು ಈ ಹಿಂದಿನ ಸಿಂಡಿಕೇಟ್ ಸಭೆಗೆ ಮಂಡಿಸಲಾಗಿತ್ತು. ಈ ವಿಷಯವಾಗಿ **04** ಬೋಧಕೇತರ ಸಿಬ್ಬಂದಿಗಳಾದ ಶ್ರೀ ಜಡೇಶಕುಮಾರ ಕೆರವಡ್ಡಿ, ಶ್ರೀ ಕೀರ್ತಿವರ್ಮಾ ಕಾಂಬಳೆ, ಶ್ರೀ ವಿನಯ ಕುಲಕರ್ಣಿ ಹಾಗೂ ಶ್ರೀ ವಿನಾಯಕ ಘಸ್ತಿ ಇವರುಗಳಿಗೆ ನೈಸರ್ಗಿಕ ನ್ಯಾಯ ನೀಡುವ ನಿಟ್ಟಿನಲ್ಲಿ ಸಿಬ್ಬಂದಿಗಳಿಗೆ ಕೊನೆಯ ಅವಕಾಶ ಕಲ್ಪಿಸಿ ಕರ್ತವ್ಯಕ್ಕೆ ಹಾಜರಾಗಲು ಅಂತಿಮ ನೋಟಿಸ್ ಜಾರಿ ಮಾಡಲು ದಿನಾಂಕ: **07.02.2025** ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ಅದರಂತೆ **04** ಜನ ಸಿಬ್ಬಂದಿಗಳಿಗೆ ನೋಟಿಸ್ ಜಾರಿ ಮಾಡಿದ ನಂತರ ಶ್ರೀ ಜಡೇಶಕುಮಾರ ಕೆರವಡ್ಡಿ, ಹಾಗೂ ಶ್ರೀ ವಿನಾಯಕ ಘಸ್ತಿ ಇವರುಗಳು ಮಾತ್ರ ಕಛೇರಿ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ಇನ್ನುಳಿದ ಇಬ್ಬರು ಸಿಬ್ಬಂದಿಗಳಾದ ಶ್ರೀ ಕೀರ್ತಿವರ್ಮಾ ಕಾಂಬಳೆ, ಶ್ರೀ ವಿನಯ ಕುಲಕರ್ಣಿ ಇವರುಗಳು ಇಲ್ಲಿಯವರೆಗೆ ಕಛೇರಿ ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲವೆಂಬ ಮಾಹಿತಿಯನ್ನು ಕುಲಸಚಿವರು ಸಭೆಗೆ ನೀಡಿದರು.<br>ಅದರಂತೆ ದಾಖಲಾತಿಗಳನ್ನು ಪರಿಶೀಲಿಸಿದ ಸಭೆಯು ಈ ಕೆಳಕಾಣಿಸಿದ ಅಂಶಗಳನ್ನು ಗಮನಿಸಿತು. |

| ಸಂ | ಹೆಸರು | ಹುದ್ದೆ | ಅನಧೀಕೃತ ಗೈರು ಹಾಜರಾದ ದಿನಗಳು |
|---|---|---|---|
| 1 | ಶ್ರೀ ಕೀರ್ತಿವರ್ಮಾ ಕಾಂಬಳೆ | ಪ್ರಥಮ ದರ್ಜೆ ಸಹಾಯಕರು | **741** ದಿನಗಳು (**2018** ರಿಂದ **2024**) |
| 2 | ಶ್ರೀ ವಿನಯ ಕುಲಕರ್ಣಿ | ದ್ವಿತೀಯ ದರ್ಜೆ ಸಹಾಯಕರು | **594** ದಿನಗಳು (**2021** ರಿಂದ **2024**) |

| | | |
|---|---|---|
| | | ಅಂದಾಜು 01 ವರ್ಷಕ್ಕಿಂತಲೂ ಹೆಚ್ಚಾಗಿ ಅನಧೀಕೃತವಾಗಿ ಗೈರು ಹಾಜರಾಗಿರುವುದರಿಂದ ಕಛೇರಿ ಕೆಲಸಗಳಿಗೆ ತೊಂದರೆ ಉಂಟಾಗುತ್ತಿದೆ ಹಾಗೂ ಇತರೇ ಸಿಬ್ಬಂದಿಗಳ ಕಾರ್ಯವೈಖರಿ ಮೇಲೆಯೂ ಕೂಡ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂದು ಸದಸ್ಯರುಗಳು ಅಭಿಪ್ರಾಯ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ ಸಭೆಯು ಕೆ.ಸಿ.ಎಸ್.ಆರ್ ನಿಯಮಾವಳಿಗಳು ಹಾಗೂ ಸಿ.ಸಿ.ಎ. ನಿಯಮ–1957 ಹಾಗೂ ಸರ್ಕಾರದ ಆದೇಶಗಳನ್ವಯ ಶ್ರೀ ಕೀರ್ತಿವರ್ಮಾ ಕಾಂಬಳೆ ಇವರನ್ನು ಪ್ರಥಮ ದರ್ಜೆ ಸಹಾಯಕರ ಹುದ್ದೆ ಹಾಗೂ ಶ್ರೀ ವಿನಯ ಕುಲಕರ್ಣಿ ದ್ವಿತೀಯ ದರ್ಜೆ ಸಹಾಯಕರ ಹುದ್ದೆ ಸೇವೆಯಿಂದ ವಜಾಗೊಳಿಸಲು ಸಭೆಯು ತೀರ್ಮಾನಿಸಿತು. **(Dismissal from Service)** |
| 17 | 2025/03/17 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧ್ಯಾಪಕರುಗಳ ಸಿ.ಎ.ಎಸ್. ಅಡಿಯಲ್ಲಿ ವೃತ್ತಿ ಪದೋನ್ನತಿ ಹಂತ 12 ರಿಂದ 13A ಸಹ ಪ್ರಾಧ್ಯಾಪಕರ ಹಂತ ಹಾಗೂ ಹಂತ 13 A ರಿಂದ 14 ಪ್ರಾಧ್ಯಾಪಕರ ಹಂತದ ಪದೋನ್ನತಿಯ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಅಧ್ಯಾಪಕರುಗಳ, ಸಿ.ಎ.ಎಸ್. ಅಡಿಯಲ್ಲಿ ವೃತ್ತಿ ಪದೋನ್ನತಿ ಹಂತ 12 ರಿಂದ 13A ಸಹ ಪ್ರಾಧ್ಯಾಪಕರ ಹಂತ ಹಾಗೂ 13 A ರಿಂದ 14 ಪ್ರಾಧ್ಯಾಪಕರ ಹಂತದ ವೃತ್ತಿ ಪದೋನ್ನತಿಗೆ ಸಂಬಂಧಿಸಿದಂತೆ ತಜ್ಞರನ್ನು ಒಳಗೊಂಡ Board of Appointment(BoA) ಸಮಿತಿಯು ಈ ಕೆಳಕಾಣಿಸಿದ ಸಿಬ್ಬಂದಿಗಳಿಗೆ ಸಂಬಂಧಿಸಿದ ಶಿಫಾರಸ್ಸು ವರದಿಯನ್ನು ಸಭೆಯು ಪರಿಶೀಲಿಸಿತು. |

| Sl No | Name of the Faculty | Departments | Academic Level |
|---|---|---|---|
| 01 | Dr. Ramesh M. N, | Political Science | Assistant Professor (Selection Grade/Academic Level 12) to **Associate Professor(Academic Level 13A)** |
| 02 | Dr. Sunilkumar M. Hosamani | Mathematics | Assistant Professor (Selection Grade/Academic Level 12) to **Associate Professor(Academic Level 13A)** |
| 03 | Dr. Mahantappa B. Chalawadi | Geography | Assistant Professor (Selection Grade/Academic Level 12) to **Associate Professor(Academic Level 13A)** |
| 04 | Dr. Kavita Kusugal | English | Assistant Professor (Selection Grade/Academic Level **13A**) to **Professor(Academic Level 14)** |

ಮುಂದುವರೆದು, ಪಟ್ಟಿ 03 ರಲ್ಲಿ ತಿಳಿಸಿದ ಸಿಬ್ಬಂದಿಯಾದ ಡಾ. ಮಹಾಂತೇಶ ಚಲವಾದಿ, ಸಹಾಯಕ ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ವಿಭಾಗ ಇವರು ಸಿ.ಎ.ಎಸ್. ಪದೋನ್ನತಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯ ಧನಸಹಾಯ ಆಯೋಗ ಇವರು ನಿಗದಿಪಡಿಸಿದ ಮಾನದಂಡಗಳನ್ನು ಪೂರ್ಣಗೊಳಿಸದೇ ಇರುವುದರಿಂದ Board of Appointment(BoA) ಸಮಿತಿಯು ಪದೋನ್ನತಿಗೆ ಶಿಫಾರಸ್ಸು ಮಾಡಿರುವುದಿಲ್ಲ. ಕಾರಣ, ಸದರಿ ಸಿಬ್ಬಂದಿಯು ಶೈಕ್ಷಣಿಕ ಮಾನದಂಡಗಳನ್ನು ಪೂರೈಸಿ ಮುಂದಿನ ದಿನಗಳಲ್ಲಿ ಸಿ.ಎ.ಎಸ್. ಪದೋನ್ನತಿಗಾಗಿ ಅರ್ಜಿ ಸಲ್ಲಿಸಿದ್ದಲ್ಲಿ ನಿಯಮಾನುಸಾರ ಪರಿಗಣಿಸುವುದು ಎಂದು ಸೂಚಿಸಿತು ಹಾಗೂ ಇನ್ನುಳಿದ ಬೋಧಕ ಸಿಬ್ಬಂದಿಗಳ ಪದೋನ್ನತಿಯನ್ನು Board of Appointment(BoA) ಸಮಿತಿಯ ಶಿಫಾರಸ್ಸಿನ್ವಯ ಕ್ರಮ ಜರುಗಿಸಲು ಸಭೆಯು ಅನುಮೋದನೆ ನೀಡಿತು.

| | | |
|---|---|---|
| 18 | 2025/03/18 | ಸ್ನಾತಕ ನೂತನ ಪಠ್ಯಕ್ರಮದ ನಿಯಮಾವಳಿಗಳನ್ನು ಅನುಮೋದಿಸುವ ಕುರಿತು. |
| ತೀರ್ಮಾನ | | **2024-25 ನೇ ಶೈಕ್ಷಣಿಕ ಸಾಲಿನಲ್ಲಿ ಜಾರಿಗೊಳಿಸಲಾಗಿರುವ ನೂತನ ಪಠ್ಯಕ್ರಮಕ್ಕೆ ಸಂಬಂಧಪಟ್ಟಂತೆ ದಿನಾಂಕ: 19.02.2025 ರಂದು ಜರುಗಿದ ಸ್ನಾತಕ ನೂತನ ಪಠ್ಯಕ್ರಮ ನಿಯಮಾವಳಿ ರಚನಾ ಸಮಿತಿಯ ಸಭೆಯ ಶಿಫಾರಸ್ಸು ಮಾಡಿರುವ ನಿಯಮಾವಳಿಗಳನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.** |
| 19 | 2025/03/19 | ಪ್ರಾಂಶುಪಾಲರ ಜೇಷ್ಠತಾ ಪಟ್ಟಿಯನ್ನು ಅನುಮೋದಿಸುವ ಕುರಿತು. |
| ತೀರ್ಮಾನ | | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ವಿವಿಧ ಸಮಿತಿ/ಸಭೆಗಳಿಗೆ ಮಹಾವಿದ್ಯಾಲಯಗಳ ಪ್ರಾಂಶುಪಾಲರ ಅವಶ್ಯಕತೆ ಇರುವುದರಿಂದ ನಿಯಮಾನುಸಾರ ಪ್ರಾಂಶುಪಾಲರ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಸದರಿ ಜೇಷ್ಠತಾ ಪಟ್ಟಿಯನ್ನು ಪರಿಶೀಲಿಸಿ ಸಿಂಡಿಕೇಟ್ ಸಭೆಯು ಅನುಸಮರ್ಥನೆ ನೀಡಿತು.** |
| 20 | 2025/03/20 | 2024-25 ನೇ ಸಾಲಿನಲ್ಲಿ ಭೌತಶಾಸ್ತ್ರ ಸಂಶೋಧನಾ ಕೇಂದ್ರದ ಮಾನ್ಯತೆ ನೀಡುವುದಕ್ಕೆ ಸಂಬಂಧಿಸಿದಂತೆ ತನಿಖಾ ಸಮಿತಿಯವರು ನೀಡಿರುವ ವರದಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆಗಾಗಿ ಮಂಡಿಸಿರುವ ಕುರಿತು. |
| ತೀರ್ಮಾನ | | **ಬಿ.ಎಲ್.ಡಿ.ಇ ಸಂಸ್ಥೆಯ ಎಸ್. ಬಿ. ಕಲಾ ಮತ್ತು ಕೆ.ಸಿ.ಪಿ ವಿಜ್ಞಾನ ಮಹಾವಿದ್ಯಾಲಯ, ವಿಜಯಪುರ ಮಹಾವಿದ್ಯಾಲಯಕ್ಕೆ 2024-25 ನೇ ಸಾಲಿನಲ್ಲಿ ಭೌತಶಾಸ್ತ್ರ ಸಂಶೋಧನಾ ಕೇಂದ್ರದ ಮಾನ್ಯತೆ ನೀಡುವುದಕ್ಕೆ ಸಂಬಂಧಿಸಿದಂತೆ ಸ್ಥಳೀಯ ತನಿಖಾ ಸಮಿತಿಯು ಸಲ್ಲಿಸಿದ ವರದಿಯನ್ನು ಪರಿಶೀಲಿಸಿ ಸಭೆಯು ಅನುಮೋದನೆ ನೀಡಿತು.** |
| 21 | 2025/03/21 | ಭೂತರಾಮನಹಟ್ಟಿ ಕಿತ್ತೂರು ರಾಣಿ ಚನ್ನಮ್ಮ ಕಿರು ಮೃಗಾಲಯದಲ್ಲಿ ಕನಿಷ್ಕ ಎಂಬ ಹುಲಿಯನ್ನು ದತ್ತು ಪಡೆಯುವ ಕುರಿತು. |
| ತೀರ್ಮಾನ | | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ಭೂತರಾಮನಹಟ್ಟಿಯ ಕಿತ್ತೂರು ರಾಣಿ ಚನ್ನಮ್ಮ ಕಿರು ಮೃಗಾಲಯದಲ್ಲಿ 2021-22, 2022-23 ಮತ್ತು 2024-25ನೇ ಸಾಲಿನ ವರೆಗೆ ಸಿಂಹ(ನಿರೂಪಮಾ)ವನ್ನು ಪ್ರತಿ ವರ್ಷಕ್ಕೆ ನಿರ್ವಹಣೆಗಾಗಿ ರೂ.1,00,000/-ಗಳಂತೆ ನೀಡಿ ದತ್ತು ಪಡೆಯಲಾಗಿತ್ತು. ಸದರಿ ಸಿಂಹವು ಬಹುಅಂಗಾಂಗಗಳ ವೈಫಲ್ಯದಿಂದ ಅಸುನಿಗಿರುವುದರಿಂದ 2025-26ನೇ ಸಾಲಿಗೆ ಮೃಗಾಲಯದಲ್ಲಿರುವ ಕನಿಷ್ಕ ಎಂಬ ಹುಲಿಯ ನಿರ್ವಹಣೆಗಾಗಿ ರೂ. 2,00,000/-ಗಳನ್ನು ನೀಡಿ ದತ್ತು ಪಡೆಯುವಂತೆ ಅರಣ್ಯಾಧಿಕಾರಿಗಳು ಸಲ್ಲಿಸಿದ ಮನವಿಗೆ ಸಭೆಯು ಅನುಮೋದನೆ ನೀಡಿತು.** |
| 22 | 2025/03/22 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯ 'Wifi Monetization' ಕುರಿತಂತೆ MoU ಮಾಡಿಕೊಂಡಿರುವ ಬಗ್ಗೆ. |
| ತೀರ್ಮಾನ | | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ವಿದ್ಯಾರ್ಥಿಗಳ ಕಲಿಕಾ ಗುಣಮಟ್ಟಗಳನ್ನು ಹೆಚ್ಚಿಸಲು ಈಗಾಗಲೇ Digital Learning Platform ಮೂಲಕ ಅವಕಾಶಗಳನ್ನು ಕಲ್ಪಿಸುತ್ತಿದ್ದು ಬಹಳಷ್ಟು ಸಂಯೋಜಿತ ಮಹಾವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳಿಗೆ ಅಂತರ್ಜಾಲ ವ್ಯವಸ್ಥೆ ಇಲ್ಲದೇ ಇರುವುದರಿಂದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ಶುಲ್ಕರಹಿತ ಅಂತರ್ಜಾಲ ವ್ಯವಸ್ಥೆಯನ್ನು(Free Wi-Fi) ಎಲ್ಲ ಸಂಯೋಜಿತ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳಿಗಾಗಿ ಪೂರೈಸಲು ಮುಂದಾಗಿದೆ. ಸದರಿ ಕಾರ್ಯವನ್ನು DOPANET.Pvt.Ltd ಎಂಬ Information Communication ನೊಂದಿಗೆ ಒಡಬಂಡಿಕೆ ಮಾಡಿಕೊಂಡಿದ್ದು ಸದರಿ ಕಂಪನಿಯು Wifi Monetization ಎಂಬ Patent ಹೊಂದಿದ್ದು ಅಂತರ್ಜಾಲ ವ್ಯವಸ್ಥೆಯ ಮೂಲಕ ಸಂಯೋಜಿತ ಮಹಾವಿದ್ಯಾಲಯಗಳಿಗೆ ಆದಾಯ ಬರುವಂತೆ ನೋಡಿಕೊಳ್ಳುತ್ತದೆ. ಇದರಿಂದ ಬರುವ ಆದಾಯವನ್ನು ಸಂಯೋಜಿತ ಮಹಾವಿದ್ಯಾಲಯಗಳು ತಮ್ಮ ಮಹಾವಿದ್ಯಾಲಯದ ಅಂತರ್ಜಾಲದ ಶುಲ್ಕವನ್ನು ಭರಿಸಿಕೊಳ್ಳಬಹುದಾಗಿದೆ ಹಾಗೂ ಈ ಮಾದರಿಯನ್ನು ಈಗಾಗಲೇ ಕೇರಳದಲ್ಲಿ ಅನುಸರಿಸಿದ್ದು ಯಶಸ್ವಿಯಾಗಿ ನಡೆಯುತ್ತಿದೆ ಎಂಬ ಮಾಹಿತಿಯನ್ನು ಕುಲಸಚಿವರು ಸಭೆಗೆ ನೀಡಿದ ಹಿನ್ನೆಲೆಯಲ್ಲಿ ಸಭೆಯು ಅನುಮೋದನೆ ನೀಡಿತು.** |
| 23 | 2025/03/23 | 2025-26 ನೇ ಸಾಲಿನ ಆಯವ್ಯಕ್ಕೆ ಅನುಮೋದನೆ ನೀಡುವ ಕುರಿತು. |
| ತೀರ್ಮಾನ | | **ದಿನಾಂಕ: 17.03.2025 ರಂದು ಜರುಗಿದ ಹಣಕಾಸು ಸಮಿತಿ ನಡಾವಳಿಯನ್ನು ಹಾಗೂ 2025-26ನೇ ಸಾಲಿನ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಆಯವ್ಯಯವನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.** |

<table>
<tr><td>24</td><td>2025/03/24</td><td colspan="3">ಕಾಮಗಾರಿ ಸಮಿತಿ(Works Committee) ಸಭೆಯ ನಡಾವಳಿಗಳನ್ನು ಅನುಮೋದನೆ ನೀಡುವ ಕುರಿತು.</td></tr>
<tr><td colspan="2" rowspan="13">ತೀರ್ಮಾನ</td><td colspan="3">ದಿನಾಂಕ: 26.03.2025 ರಂದು ಜರುಗಿದ Works Committee ಸಭೆಯ ನಡಾವಳಿಗಳನ್ನು ಅನುಮೋದನೆಗಾಗಿ ಈ ಕೆಳಕಾಣಿಸಿದಂತೆ ಮಂಡಿಸಲಾಯಿತು.</td></tr>
<tr><td>ಕ್ರ.ಸಂ</td><td>ಪಟ್ಟಿ</td><td>ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ</td></tr>
<tr><td>1</td><td>Construction of Main Road in the Premises of RCU New Campus Hirebagewadi, Belagavi</td><td>497.00</td></tr>
<tr><td>2</td><td>Construction of Internal Roads for Phase-1 Buildings in the Premises of RCU New Campus Hirebagewadi</td><td>494.00</td></tr>
<tr><td>3</td><td>Construction of Internal Roads for Boys' and Girls' Hostel Blocks in the Premises of RCU New Campus Hirebagewadi</td><td>496..00</td></tr>
<tr><td>4</td><td>Construction Drains and Water Treatment Plant With Pumps and other fixtures in the Premises of RCU New Campus Hirebagewadi</td><td>495 .00</td></tr>
<tr><td>5</td><td>Construction Retaining Walls for Internal Roads and Campus Street Lighting and Electrification in the Premises of RCU New Campus Hirebagewadi</td><td>498.00</td></tr>
<tr><td>6</td><td>Construction Retaining Walls for Main Roads in the Premises of RCU New Campus Hirebagewadi</td><td>498.00</td></tr>
<tr><td>7</td><td>Protection Works for Lake and Campus Local Area Networking in the Premises of RCU New Campus Hirebagewadi</td><td>499.00</td></tr>
<tr><td>8</td><td>Construction of Sewage Treatment Plant with its equipment and External Water Supply in the Premises of RCU New campus, Hirebagewadi, Belagavi ಕಾಮಗಾರಿಯನ್ನು ಕೈಗೊಳ್ಳುವ ಕುರಿತು</td><td>497.00</td></tr>
<tr><td>9</td><td>Construction of 6 nos Rain Water harvesting tanks of 1.5lakh liters to Phase-01 Academic Buildings with Recharge Pits in the Premises of RCU New campus, Hirebagewadi, Belagavi ಕಾಮಗಾರಿಯನ್ನು ಕೈಗೊಳ್ಳುವ ಕುರಿತು</td><td>85.00</td></tr>
<tr><td>10</td><td>Annual Maintenance of Civil, Electrical, Plumbing, Waterproofing, Fabrication etc for Rani Channamma University Main campus Vidyasangama Belagavi.</td><td>150.00</td></tr>
<tr><td>11</td><td>Drilling of 5 nos borewells and its fittings &connections in the Premises of RCU New campus, Hirebagewadi, Belagavi ಕಾಮಗಾರಿಯನ್ನು ಕೈಗೊಳ್ಳುವ ಕುರಿತು</td><td>35 .00</td></tr>
</table>

| | | | | |
|---|---|---|---|---|
| | | 12 | Laying of Pipe line from borewell point to Kannada department crossing at RCU, Bhutaramanahatti, Belagavi ಕಾಮಗಾರಿಯನ್ನು ಕೈಗೊಳ್ಳಲು ಘಟನೋತ್ತರ ಅನುಮತಿಯನ್ನು ನೀಡುವ ಕುರಿತು. | 05.00 |
| | | 13 | Construction of Additional Toilet Blocks , Internal Roads, Providing pavers, street lights and other minor renovation works at P.G.Center, Vijayapur of RCU, Belagavi. | 20.00 |
| | | 14 | Rewiring of Main Building, Administrative building, Chemistry department and quarters of RCU Main campus, Bhutaramanahatti, Belagavi | 100.00 |

| | | |
|---|---|---|
| | | ಮುಂದುವರೆದು, ಸದಸ್ಯರಾದ ಶ್ರೀ ಮಹಾಂತೇಶ ಕಂಬಾರ ಇವರು ಮಾತನಾಡಿ, ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ಸದರಿ ಕಾಮಗಾರಿಗಳನ್ನು ಕೈಗೊಳ್ಳುವುದರಿಂದ ವಿಶ್ವವಿದ್ಯಾಲಯದ ಇನ್ನಿತರ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಮುಂದಿನ ದಿನಗಳಲ್ಲಿ ತೊಂದರೆಯಾಗಬಹುದು. ಕಾರಣ, ಆದಷ್ಟು ಸರ್ಕಾರದಿಂದ ಅನುದಾನವನ್ನು ಮಂಜೂರಾತಿ ಮಾಡಿಸಿಕೊಳ್ಳಲು ವಿಶ್ವವಿದ್ಯಾಲಯವು ಹೆಚ್ಚಿನ ಪ್ರಯತ್ನ ಮಾಡಲು ಸಲಹೆ ನೀಡಿದರು.<br>ಈಗಾಗಲೇ 05 ಕಟ್ಟಡ ಕಾಮಗಾರಿಗಳು ಪೂರ್ಣಗೊಂಡಿದ್ದು ಕೆಲವೇ ದಿನಗಳಲ್ಲಿ ವಿಭಾಗಗಳನ್ನು ನೂತನ ಕಟ್ಟಡಕ್ಕೆ ಸ್ಥಳಾಂತರಿಸಲಾಗುವುದು. ಕಾರಣ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳಿಗೆ ಮೂಲಸೌಕರ್ಯಗಳನ್ನು ಕಲ್ಪಿಸುವುದು ಅವಶ್ಯಕವಾಗುವ ಕಾರಣ ಮೇಲೆ ತಿಳಿಸಿರುವ ಕಾಮಗಾರಿಗಳಲ್ಲಿ ತಿಳಿಸಿದಂತೆ ಕ್ರಮ ಸಂಖ್ಯೆ: 1, 6, 9, 10, 11, 12, 13, 14 ರವರೆಗಿನ ಒಟ್ಟು 8 ಕಾಮಗಾರಿಗಳನ್ನು KTPP ನಿಯಮಾವಳಿಗಳನ್ವಯ ಕೈಗೆತ್ತಿಗೊಳ್ಳಲು ಸಭೆಯು ತೀರ್ಮಾನಿಸಿತು.<br>ಮುಂದುವರೆದು, ಈ ಕಾಮಗಾರಿಗಳನ್ನು ಅಗತ್ಯ Third Party Inspection ಯಿಂದ ತಪಾಸಣೆ ಮಾಡಿಸಿ ನಿಯೋಜಿಸಿದ ಕಾಲಾವಕಾಶದಲ್ಲಿ ಗುಣಮಟ್ಟದ ಕಾಮಗಾರಿಯನ್ನು ಕೈಗೊಳ್ಳಲು ಮತ್ತು ಕಾಮಗಾರಿಗೆ ಸಂಬಂಧಿಸಿದ ನಿಯಮಾನುಸಾರ ಕ್ರಮಕ್ಕೆ ಸಭೆ ಅನುಮತಿ ನೀಡಿತು. |
| 25 | 2025/03/25 | 2024-25 ನೇ ಸಾಲಿನಲ್ಲಿ ಎಸ್.ಸಿ.ಪಿ/ಟಿ.ಎಸ್.ಪಿ. ಯೋಜನೆಯಡಿ ಹಮ್ಮಿಕೊಳ್ಳುವ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಅನುಮೋದನೆ ನೀಡುವ ಕುರಿತು. |
| ತೀರ್ಮಾನ | | 2024-25 ನೇ ಸಾಲಿಗೆ ಸ್ನಾತಕೋತ್ತರ ವಿವಿಧ ವಿಭಾಗಗಳಲ್ಲಿ ಪ್ರವೇಶ ಪಡೆದು ಅಧ್ಯಯನ ಮಾಡುತ್ತಿರುವ ಪ್ರಥಮ ಹಾಗೂ ದ್ವಿತೀಯ ವರ್ಷದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ಲ್ಯಾಪ್‌ಟಾಪ್‌ಗಳನ್ನು ಖರೀದಿಸುವ ಕುರಿತಾಗಿ ಸಭೆಯ ಅನುಮೋದನೆ ಕೋರಲಾಯಿತು. ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಠಿಯಿಂದ ಪ್ರಥಮ ವರ್ಷದ ಮತ್ತು ದ್ವಿತೀಯ ವರ್ಷದ ಎಲ್ಲಾ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್‌ಗಳನ್ನು ಖರೀದಿಸಲು ಸಭೆಯು ಅನುಮೋದನೆ ನೀಡಿತು. ಒಟ್ಟು 627 ವಿದ್ಯಾರ್ಥಿಗಳಿಗೆ ಅತ್ಯುತ್ತಮ ದರ್ಜೆ/ಗುಣಮಟ್ಟದ ಲ್ಯಾಪ್‌ಟಾಪ ಖರೀದಿಸಲು ಅಗತ್ಯ ಟೆಂಡರ್ ಪ್ರಕ್ರಿಯೆ ಜರುಗಿಸಲು ಮತ್ತು ನಿಯಮಾನುಸಾರ ಕ್ರಮ ಕೈಗೊಳ್ಳಲು ಮತ್ತು ಸಿಂಡಿಕೇಟ್ ಸದಸ್ಯರಿಗೆ ಮಾಹಿತಿ ಒದಗಿಸಲು ಮತ್ತು ಗ್ರಾಮ ಪಂಚಾಯಿತಿ ಅಥವಾ ಯಾವುದೇ ಸ್ಥಳೀಯ ನಗರ ಸಂಸ್ಥೆಗಳಿಂದ(TP/TMS/CMS/Corp)ಗಳಿಂದ ಈ ವಿದ್ಯಾರ್ಥಿಗಳು ಲ್ಯಾಪಟಾಪ್ ಸೌಲಭ್ಯವನ್ನು ಪಡೆಯದೇ ಇರುವ ಬಗ್ಗೆ ಮತ್ತು ಸರ್ಕಾರದಿಂದ ಸೌಲಭ್ಯ ಪಡೆಯದೇ ಇರುವ ಬಗ್ಗೆ ದೃಢೀಕರಿಸಿಕೊಂಡು ಅಗತ್ಯ ಪ್ರಮಾಣ ಪತ್ರ ಪಡೆದು ವಿತರಿಸಲು ಸಿಂಡಿಕೇಟ ಸದಸ್ಯರಾದ ಶ್ರೀ ಮಹಾಂತೇಶ ಕಂಬಾರ ಕೋರಿದರು. ಇದಕ್ಕೆ ಸಭೆ ಸಹಮತಿ ವ್ಯಕ್ತಪಡಿಸಿ ಪೂರ್ಣ ಪ್ರಕ್ರಿಯೆ KTPP ಯಂತೆ ಜರುಗಿಸಲು ಅನುಮತಿ ನೀಡಿತು. |

| ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು | |
|---|---|
| 2025/03/I | ನೂತನ ಕಟ್ಟಡ ಹಿರೇಬಾಗೇವಾಡಿಯಲ್ಲಿ 2025-26ನೇ ಶೈಕ್ಷಣಿಕ ಸಾಲಿನಿಂದ ಹೊಸ ಯೋಗಾ ಕೇಂದ್ರವನ್ನು ಪ್ರಾರಂಭಿಸಲು ಸಿಂಡಿಕೇಟ್ ಸಭೆಗೆ ಮಂಡಿಸುವ ಕುರಿತು |
| ತೀರ್ಮಾನ | **ನೂತನ ಕಟ್ಟಡ ಹಿರೇಬಾಗೇವಾಡಿಯಲ್ಲಿ 2025-26ನೇ ಶೈಕ್ಷಣಿಕ ಸಾಲಿನಿಂದ ಹೊಸ ಯೋಗಾ ಕೇಂದ್ರವನ್ನು ಪ್ರಾರಂಭಿಸಲು "ಆಯುಷ್ ಸಚಿವಾಲಯ ಆಯುಷ್ ಭವನ್ ಜಿಪಿಒ ಕಾಂಪ್ಲೆಕ್ಸ್, ನವದೆಹಲಿ" ಇವರಿಗೆ ಆರ್ಥಿಕ ನೆರವಿಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯು ಅನುಮೋದನೆ ನೀಡಿತು.** |
| 2025/03/II | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧ್ಯಾಪಕರುಗಳ ಸಿ.ಎ.ಎಸ್. ಅಡಿಯಲ್ಲಿ ವೃತ್ತಿ ಪದೋನ್ನತಿ ಹಂತ 11ರಿಂದ 12 ಸಹಾಯಕ ಪ್ರಾಧ್ಯಾಪಕರ ಹಂತ ಮತ್ತು 12 ರಿಂದ 13A ಸಹ ಪ್ರಾಧ್ಯಾಪಕರ ಹಂತ ಹಾಗೂ ಹಂತ14 ರಿಂದ15 ಹಿರಿಯ ಪ್ರಾಧ್ಯಾಪಕರ ಹಂತದ ಪದೋನ್ನತಿಯ ಕುರಿತು. |
| ತೀರ್ಮಾನ | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಅಧ್ಯಾಪಕರುಗಳ, ಸಿ.ಎ.ಎಸ್. ಅಡಿಯಲ್ಲಿ ವೃತ್ತಿ ಪದೋನ್ನತಿ ಹಂತ 11ರಿಂದ 12 ಸಹಾಯಕ ಪ್ರಾಧ್ಯಾಪಕರ ಹಂತ ಮತ್ತು 12 ರಿಂದ 13A ಸಹ ಪ್ರಾಧ್ಯಾಪಕರ ಹಂತ ಹಾಗೂ ಹಂತ14 ರಿಂದ 15 ಹಿರಿಯ ಪ್ರಾಧ್ಯಾಪಕರ ಹಂತದ ಪದೋನ್ನತಿಗೆ ಸಂಬಂಧಿಸಿದಂತೆ ತಜ್ಞರನ್ನು ಒಳಗೊಂಡ Board of Appointment (BoA) ಸಮಿತಿಯು ಈ ಕೆಳಕಾಣಿಸಿದ ಅಧ್ಯಾಪಕರುಗಳ ಅರ್ಜಿಗಳನ್ನು ಪರಿಶೀಲಿಸಿ ಸಲ್ಲಿಸಿದ ಶಿಫಾರಸ್ಸು ವರದಿಯನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು ಹಾಗೂ ಈ ಕೆಳಕಾಣಿಸಿದಂತೆ ಪದೋನ್ನತಿ ನೀಡಲು ತೀರ್ಮಾನಿಸಿತು.** |

| Sl No | Name of the Faculty | Departments | Academic Level |
|---|---|---|---|
| 01 | **Dr. Manjunath N. K.** | **Geography** | Assistant Professor (Senior Scale/Academic Level 11) to **Assistant Professor** (Selection Grade/**Academic Level 12)** |
| 02 | **Dr. Sushma R.** | **Education** | Assistant Professor (Selection Grade/Academic Level 12) to **Associate Professor(Academic Level 13A)** |
| 03 | **Dr. Gajanan Naik** | **Kannada** | Assistant Professor (Selection Grade/Academic Level 12) to **Associate Professor(Academic Level 13A)** |
| 04 | **Dr. Mahantesh M Kuri** | **Business Administration** | Assistant Professor (Selection Grade/Academic Level 12) to **Associate Professor(Academic Level 13A)** |
| 05 | **Dr. Devaraju** | **Business Administration** | Assistant Professor (Selection Grade/Academic Level 12) to **Associate Professor(Academic Level 13A)** |
| 06 | **Prof. S. C. Patil** | **Business Administration** | Professor (Academic Level 14)to **Senior Professor(Academic Level 15)** |

| | |
|---|---|
| 2025/03/III | ಉಳಿಕೆ ವೃಂದದ ಪರಿಶಿಷ್ಟ ಪಂಗಡದ ಕಛೇರಿ ಅಧೀಕ್ಷರ-01 ಹುದ್ದೆಯ ನೇಮಕಾತಿಯ ಪ್ರಕ್ರಿಯೆಗೆ ಸಂಬಂಧಿಸಿದಂತೆ ವಿವಿಧ ಬಗೆಯ ಅಂಕಗಳನ್ನು ನಿಗದಿಪಡಿಸುವ ಕುರಿತು |
| ತೀರ್ಮಾನ | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಉಳಿಕೆ ವೃಂದದ ಪರಿಶಿಷ್ಟ ಪಂಗಡದ ಮೀಸಲಾತಿಯಲ್ಲಿ ಉಳಿದಿರುವ ಕಛೇರಿ ಅಧೀಕ್ಷಕರ-01 ಹುದ್ದೆಯನ್ನು ನೇಮಕಾತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಿ ಅಧಿಸೂಚನೆ ಪ್ರಕಟಿಸಲಾಗಿದೆ. ವಿಶ್ವವಿದ್ಯಾಲಯದಲ್ಲಿ ಈ ಹಿಂದೆ ನಡೆದ ಉಪಕುಲಸಚಿವರು, ಸಹಾಯಕ ಕುಲಸಚಿವರು ಮತ್ತು ಕಛೇರಿ ಅಧೀಕ್ಷಕರು ಹುದ್ದೆಗಳ ನೇಮಕಾತಿ ಪ್ರಕ್ರಿಯೆಯಲ್ಲಿ ಪಿ.ಜಿ/ಯು.ಜಿ(ಅರ್ಹತೆ)-50% ಲಿಖಿತ ಪರೀಕ್ಷೆ-25%, ಕಂಪ್ಯೂಟರ ಕೌಶಲ್ಯ ಪರೀಕ್ಷೆ-12.5% ಮೌಖಿಕ ಪರೀಕ್ಷೆ-12.5% ರಂತೆ ಒಟ್ಟು 100 ಅಂಕಗಳನ್ನು ನಿಗದಿಪಡಿಸಲಾಗಿತ್ತು.** |

| | |
|---|---|
| | ಮುಂದುವರೆದು, ರಾಜ್ಯ ಸರ್ಕಾರದ ಯಾವುದೇ ನೇಮಕಾತಿಗಳಲ್ಲಿ ಪದವಿಯನ್ನು ಅರ್ಹತಾ ಮಾನದಂಡವಾಗಿ ಮಾತ್ರ ಪರಿಗಣಿಸಿ ಸ್ಪರ್ಧಾತ್ಮಕ ಜಗತ್ತಿನಲ್ಲಿ ಆಡಳಿತ ಕಚೇರಿಗಳಲ್ಲಿ ಹೆಚ್ಚು ಸಾಮಾನ್ಯ ಜ್ಞಾನ ಹೊಂದಿದ ಪದವೀಧರರಿಗೆ ಅವಕಾಶ ಕಲ್ಪಿಸುವುದು ಯುಕ್ತವಾಗಿರುತ್ತದೆ ಹಾಗೂ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಸಂದರ್ಶನಕ್ಕೆ ಶೇ. 12.5 ರಂತೆ ಅಂಕಗಳನ್ನು ಮುಂದುವರೆಸಿ ಈ ಕೆಳಕಾಣಿಸಿದ ಕೋಷ್ಟಕದಂತೆ ಅಂಕಗಳನ್ನು ಮುಂದಿನ ಬೋಧಕೇತರ ನೇಮಕಾತಿಗಳಲ್ಲಿ ನಿಗದಿಪಡಿಸಲು ಕುಲಸಚಿವರು ಸಭೆಗೆ ಕೋರಿದ ಹಿನ್ನೆಲೆಯಲ್ಲಿ ಸಭೆಯು ಅನುಮೋದನೆ ನೀಡಿತು. |

| ಲಿಖಿತ ಪರೀಕ್ಷೆ | ಪಿಯು/ಯುಜಿ/ಪಿಜಿ (ಶೈಕ್ಷಣಿಕ ಅರ್ಹತೆ) | ಕಂಪ್ಯೂಟರ ಕೌಶಲ್ಯ ಪರೀಕ್ಷೆ | ಮೌಖಿಕ ಪರೀಕ್ಷೆ/ಸಂದರ್ಶನ | ಒಟ್ಟು |
|---|---|---|---|---|
| 50% | 25% | 12.5% | 12.5% | 100 |

| | |
|---|---|
| 2025/03/IV | ರಫೀ ಭಂಡಾರಿ, ಸಿಂಡಿಕೇಟ್ ಸದಸ್ಯರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಇವರು ಪ್ರಸ್ತಾಪಿಸಿರುವ ವಿಷಯಗಳು:<br>1. ದೈಹಿಕ ಶಿಕ್ಷಣ ಮತ್ತು ಕ್ರೀಡಾ ನಿರ್ದೇಶನಾಲಯವನ್ನು ಬಲವರ್ಧನೆಗೊಳಿಸಲು ಮತ್ತು ವಿಶ್ವವಿಶ್ವವಿದ್ಯಾಲಯ ಆಟೋಟ ಮತ್ತು ದೈಹಿಕ ಶಿಕ್ಷಣಕ್ಕೆ ಹೆಚ್ಚಿನ ಒತ್ತು ಕೊಡುವಂತೆ ಹಾಗೂ ಸ್ಥಿತಿ-ಗತಿಗಳ ಕುರಿತು:<br>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಕ್ರೀಡಾ ವಿಭಾಗ ಇರುವುದಿಲ್ಲ ಮತ್ತು ಸಂಬಂಧಿಸಿದ ಹುದ್ದೆಗಳು ಸರ್ಕಾರದಿಂದ ಮಂಜೂರಾಗಿರುವುದಿಲ್ಲ. ಪ್ರಸ್ತುತ ಇರುವ ಆವರಣದಲ್ಲಿ ಸ್ಥಳದ ಅಭಾವ ಕೂಡ ಇರುತ್ತದೆ. Khelo India ಯೋಜನೆಗೆ ಈಗಾಗಲೇ ಡಿಪಿಆರ್ ರಚಿಸಿ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂಬ ಮಾಹಿತಿಯನ್ನು ಮಾನ್ಯ ಕುಲಪತಿಗಳು ಸಭೆಗೆ ನೀಡಿದರು. ಚರ್ಚಿಸಿದ ಸಭೆಯು ಕ್ರೀಡೆಗೆ ಉತ್ತೇಜನ ನೀಡಲು ಮತ್ತು ಅಭಿವೃದ್ಧಿಗೊಳಿಸಲು Board of Sports ರಚಿಸಲು ತೀರ್ಮಾನಿಸಿತು.<br>2. ಸ್ನಾತಕೋತ್ತರ ಕೇಂದ್ರ, ವಿಜಯಪುರದ ಗೇಟ್ ಅಳವಡಿಸುವ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂಬ ಮಾಹಿತಿಯನ್ನು ಸಭೆಗೆ ನೀಡಲಾಯಿತು. |
| 2025/03/V | 2025-26 ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕ ಕೋರ್ಸಗಳ ಪ್ರಥಮ ಸೆಮೆಸ್ಟರ್ ಏಕರೂಪ ಶುಲ್ಕ ಹಾಗೂ 3 ಮತ್ತು 5ನೇ ಸೆಮೆಸ್ಟರ್ ಶುಲ್ಕ ನಿಗದಿ ಮಾಡುವ ಕುರಿತು. |
| ತೀರ್ಮಾನ | **2025-26 ನೇ ಶೈಕ್ಷಣಿಕ ಸಾಲಿನ ಪ್ರಥಮ ಸೆಮೆಸ್ಟರ್‌ನ ಸ್ನಾತಕ ಕೋರ್ಸಗಳ ಪ್ರವೇಶಾತಿಗೆ ಏಕರೂಪ ಶುಲ್ಕ ಹಾಗೂ 3 ಮತ್ತು 5ನೇ ಸೆಮೆಸ್ಟರ್ ಶುಲ್ಕದ ಪಟ್ಟಿಯನ್ನು ಸಭೆಯ ಅನುಮೋದನೆಗೆ ಪ್ರಸ್ತುತಪಡಿಸಲಾಯಿತು.**<br>ಸದಸ್ಯರಾದ ಶ್ರೀ ಮಹಾಂತೇಶ ಕಂಬಾರ ಇವರು E-Vidya App ಗೆ ನಿಗದಿಪಡಿಸಲಾದ ರೂ.250/- ಶುಲ್ಕವನ್ನು ಪ್ರವೇಶಾತಿ ಶುಲ್ಕದಲ್ಲಿ ಒಳಪಡಿಸುವುದು ಸೂಕ್ತ ಅಲ್ಲ. E-Vidya App ಬಳಕೆ ಮಾಡಲು ಆಸಕ್ತಿ ಇರುವ ವಿದ್ಯಾರ್ಥಿಗಳಿಂದ ಮಾತ್ರ ಶುಲ್ಕವನ್ನು ಭರಣಾ ಮಾಡಿಕೊಳ್ಳಲು ಸಲಹೆ ನೀಡಿದರು. ಪ್ರತಿಕ್ರಿಯಿಸಿದ ಕುಲಪತಿಗಳು E-Vidya App ರಾಜ್ಯದ ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಕೂಡ ಚಾಲ್ತಿಯಲ್ಲಿ ಇದೆ. ಇದರಿಂದ ಬೋಧಕ ಸಿಬ್ಬಂದಿಗಳು ಬೋಧಿಸಿದ ಪಾಠಗಳು ಮಾತ್ರವಲ್ಲದೇ ಪರೀಕ್ಷಾ, ತಂತ್ರಜ್ಞಾನಗಳ ಮಾಹಿತಿಗಳನ್ನು ಕೂಡ ಪಡೆಯಬಹುದು. ಈ E-Vidya App ನಿಂದ ವಿಶ್ವವಿದ್ಯಾಲಯಕ್ಕೆ ಮೇಲದರ್ಜೆಯ ನ್ಯಾಕ್ ಮಾನ್ಯತೆ ಪಡೆಯಲು ಸಹಾಯಕರಾಗಿಯಾಗುವುದು ಎಂದರು.<br>ಚರ್ಚಿಸಿದ ಸಭೆಯು, 2025-26ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕ ಕೋರ್ಸಗಳ ಪ್ರಥಮ ಸೆಮೆಸ್ಟರ್‌ಗೆ ಸರ್ಕಾರದ ಏಕರೂಪ ಶುಲ್ಕವನ್ನು ಹಾಗೂ 3 ಮತ್ತು 5ನೇ ಸೆಮೆಸ್ಟರ್ ಶುಲ್ಕವನ್ನು ಪ್ರಸ್ತುತ ಇರುವ ಶುಲ್ಕದಲ್ಲಿ ಶೇ. 20 ರಷ್ಟು ಹೆಚ್ಚಿಸಿ ನಿಗದಿಪಡಿಸಲು ಸಭೆಯು ತೀರ್ಮಾನಿಸಿತು. ಮುಂದುವರೆದು, ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ ಮತ್ತು ಸ್ನಾತಕ ಎಲ್ಲ ಮಹಾವಿದ್ಯಾಲಯಗಳಿಗೆ ಈ ಕುರಿತಾಗಿ ಸುತ್ತೋಲೆ ಹೊರಡಿಸಲು ಸಭೆಯು ಅನುಮೋದನೆ ನೀಡಿತು. |
| 2025/03/VI | 2024-25ನೇ ಸಾಲಿಗೆ ಪಿಎಚ್.ಡಿ. ಪ್ರವೇಶ ಪ್ರಕ್ರಿಯೆ ಕುರಿತು. |
| ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ವಿಷಯಗಳಲ್ಲಿ ಪಿಎಚ್.ಡಿ. ಪದವಿ(ಪೂರ್ಣಕಾಲಿಕ ಮತ್ತು ಅರೆಕಾಲಿಕ) ಪ್ರವೇಶಾತಿಗೆ 2024-25ನೇ ಸಾಲಿಗೆ ಅರ್ಹ ಅಭ್ಯರ್ಥಿಗಳಿಂದ ಆನ್-ಲೈನ್/ತಾಂತ್ರಿಕ ತೊಂದರೆ ಉಂಟಾದಲ್ಲಿ ಆಫ್-ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿ ಅಧಿಸೂಚನೆಯನ್ನು |

| | |
|---|---|
| | ಹೊರಡಿಸಲಾಗಿತ್ತು. ಈ ಕುರಿತಂತೆ ವಿವಿಧ ವಿಭಾಗಗಳಿಂದ ಸಲ್ಲಿಸಿರುವ ಅಭ್ಯರ್ಥಿಗಳ ಅರ್ಜಿಗಳ ಪಟ್ಟಿಯನ್ನು ಹಾಗೂ ಪ್ರವೇಶ ಪರೀಕ್ಷೆಯ ಪಠ್ಯಕ್ರಮವನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು. |
| 2025/03/VII | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಬಿ.ಎಡ್/ಎಂ.ಎಡ್ ಕೋರ್ಸ್‌ಗಳು ಹಾಗೂ E-Vidya App ಕುರಿತಾಗಿ ವಿವರವಾಗಿ ಚರ್ಚಿಸಲು ಪ್ರತ್ಯೇಕ ಸಭೆಯನ್ನು ಆಯೋಜಿಸಲು ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಸಭೆಯು ಒಪ್ಪಿಗೆ ಸೂಚಿಸಿತು. |
| 2025/03/VIII | ದಿನಾಂಕ: **07.11.2022** ರಂದು ಯು.ಜಿ.ಸಿ. ಹೊರಡಿಸಿರುವ ಅಧಿಸೂಚನೆಯ ಪ್ರಕಾರ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಪಿಎಚ್.ಡಿ. ನಿಯಮಾವಳಿಗಳಲ್ಲಿ ಅಳವಡಿಸಿಕೊಳ್ಳಲು ಒಂದು ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ಯು.ಜಿ.ಸಿ. ನಿಯಮಾವಳಿಗಳ ಪ್ರಕಾರ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಪಿಎಚ್.ಡಿ. ನಿಯಮಾವಳಿಗಳಲ್ಲಿ ಅಳವಡಿಸಿಕೊಂಡು ಸಲ್ಲಿಸಿದ ಪಿಎಚ್.ಡಿ. ನಿಯಮಾವಳಿಗಳ ಕರಡು ಪ್ರತಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು. |

ಕೊನೆಯದಾಗಿ, ಎಲ್ಲ ಸದಸ್ಯರುಗಳಿಗೆ ವಂದನೆಯನ್ನು ಸಲ್ಲಿಸುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

8/4/2025

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು — ಕುಲಪತಿಗಳು ಹಾಗೂ ಅಧ್ಯಕ್ಷರು

ಇವರಿಗೆ,

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲ ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ,

ಪ್ರತಿ ಮಾಹಿತಿಗಾಗಿ : ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ – 04, ಭೂತರಾಮನಹಟ್ಟಿ, ಬೆಳಗಾವಿ – 591156
(ನ್ಯಾಕ್ ಮಾನ್ಯತೆ B+ ಗ್ರೇಡ್– 2021)PM-USHA (MERU)
RANI CHANNAMMA UNIVERSITY
Vidyasangama, National Highway – 04, Bhootaramanahatti, Belagavi – 591156
(NAAC Accredited with B+ Grade – 2021) PM-USHA (MERU)
E-mail: registrar@rcub.ac.in
ಕುಲಸಚಿವರ ಕಾರ್ಯಾಲಯ
Office of the Registrar
Website: www.rcub.ac.in
Phone No.: 0831-2565234

ಕ್ರ.ಸಂ.: ರಾಚವಿಬೆ/ಕುಸಕಾ/ಜಿಎಡಿ/ಸಿಂಡಿಕೇಟ್/2025-26/ 158/1 ದಿನಾಂಕ: 09.04.2025

ಮಾನ್ಯ ಸಿಂಡಿಕೇಟ್ ಸದಸ್ಯರೆ,

ವಿಷಯ : ದಿನಾಂಕ : 27-03-2025 ರಂದು ಜರುಗಿದ ಸಿಂಡಿಕೇಟ್ ಸಭೆಯ ನಡಾವಳಿಯ ಪ್ರತಿಯನ್ನು ಕಳುಹಿಸುವ ಕುರಿತು.

ಉಲ್ಲೇಖ: ಸಿಂಡಿಕೇಟ್ ಸಭ ನಡೆದ ದಿನಾಂಕ : 27-03-2025

ದಿನಾಂಕ : 27-03-2025 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಮಾಡಿರುವ ಚರ್ಚೆ ಮತ್ತು ಕೈಕೊಳ್ಳಲಾಗಿರುವ ನಿರ್ಣಯಗಳ ಪ್ರತಿಯನ್ನು ಈ ಮೂಲಕ ತಮ್ಮ ಅವಗಾಹನೆಗಾಗಿ ಮತ್ತು ಧೃಡೀಕರಣಕ್ಕಾಗಿ ಕಳಸುತ್ತಿದ್ದೇನೆ. ಇದರಲ್ಲಿರುವ ಯಾವುದೇ ವಿಷಯಗಳ ಬಗ್ಗೆ ತಮ್ಮ ಸಹಮತಿ ಇಲ್ಲದಿದ್ದಲ್ಲಿ ಲಿಖಿತವಾಗಿ ಅಗತ್ಯ ಟಿಪ್ಪಣಿಗಳೊಂದಿಗೆ ದಿನಾಂಕ : 17-04-2025ರ ಒಳಗೆ ವಿಶ್ವವಿದ್ಯಾಲಯಕ್ಕೆ ಇ-ಮೇಲ್ ಮುಖಾಂತರ ತಿಳಿಸಲು ವಿನಂತಿಸಲಾಗಿದೆ.

ತಮ್ಮ ಲಿಖಿತ ಅಭಿಪ್ರಾಯ ಬಾರದಿದ್ದಲ್ಲಿ ಇಲ್ಲಿನ ವಿಷಯಗಳಿಗೆ ತಮ್ಮ ಧೃಡೀಕರಣ ಇದೆಯೆಂದು ಭಾವಿಸಲಾಗುವುದು.

ವಂದನೆಗಳು.

ತಮ್ಮ ವಿಶ್ವಾಸಿ,

ಸಂತೋಷ ಕಾಮಗೌಡ ಕೆ.ಎ.ಎಸ್.
ಕುಲಸಚಿವರು
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ